# ಅಧ್ಯಯನ – 1 Study 1

# ಪಾಪ ವಿಮೋಚನೆಯ ಸತ್ಯತೆಗಳು ಮತ್ತು ತತ್ವಜ್ಞಾನ

## The Fact and Philosophy of The Atonement

## ವಾಸ್ತವಾಂಶ ಮತ್ತು ತತ್ವಜ್ಞಾನ

**ಸತ್ಯವೇದದ ದೃಷ್ಟಿಕೋನದಿಂದ ಇದು ಕ್ರೈಸ್ತ ಸಿದ್ಧಾಂತದ ಬುನಾದಿಯಲ್ಲಿ ಅಡಗಿದೆ – ಪ್ರಸ್ತಾಪದ ಮೂರು ದೃಷ್ಟಿಕೋನಗಳು – ಸಂಪ್ರದಾಯಬದ್ಧವಾದ ದೃಷ್ಟಿಕೋನ, – ಸಂಪ್ರದಾಯ ವಿರುದ್ಧವಾದ ದೃಷ್ಟಿಕೋನ; – ಇವೆರಡನ್ನೂ ಒಂದುಗೂಡಿಸಿ ಸಾಮರಸ್ಯವನ್ನುಂಟುಮಾಡುವ ಸತ್ಯವೇದದ ದೃಷ್ಟಿಕೋನ – ವಿಕಸನವಾದವು ಈ ಪ್ರಸ್ತಾಪದ ಸತ್ಯತೆಗೆ ವಿರೋಧವಾಗಿದೆ – ದೈವಿಕ ನ್ಯಾಯದ ಸಂಧಾನವು ಯಶಸ್ವಿಯಾಗಿ ಪೂರೈಸಿದೆ – ಸಭೆಯ ಸಂಧಾನವು ಪ್ರಗತಿಯಲ್ಲಿದೆ – ಪ್ರಪಂಚದ ಭವಿಷ್ಯದ ರಾಜಿ ಸಂಧಾನ – ಮಧ್ಯಸ್ಥಿಕೆಯ ಸಿಂಹಾಸನವು ಮತ್ತು ದೇವರ ರಾಜ್ಯವು ತೆರವುಗೊಂಡಾಗ ಅಂತಿಮ ಫಲಿತಾಂಶಗಳು.**

ಪಾಪ ನಿವೃತ್ತಿಯ ಸಿದ್ಧಾಂತವು ಕ್ರೈಸ್ತ ಧರ್ಮದ ತಳಹದಿಯಲ್ಲಿಯೇ ಅಡಗಿದೆ. ಈ ರೀತಿಯಲ್ಲಿ ಇದು ದೈವಜ್ಞಾನ ಶಾಸ್ತ್ರದಲ್ಲಿ ಬಹು ಮಹತ್ವವಾದ ಸ್ಥಾನವನ್ನು ಹೊಂದಿದ್ದು, ಈ ಪ್ರಸ್ತಾಪದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಹೊಂದಿಕೊಳ್ಳುವುದು ಬಹಳ ಅಗತ್ಯವಾಗಿದೆ ಮತ್ತು ಇದು ಸಾಮಾನ್ಯವಾಗಿ ಕ್ರೈಸ್ತ ಜನರಲ್ಲಿ ಒಪ್ಪಿಗೆಯಾಗಿದೆ. ಪರಂತು, ಪಾಪ ನಿವೃತ್ತಿಯನ್ನು ನಂಬುವುದಾದರೂ, ಇದನ್ನು ಬಲು ಕಡಿಮೆಯಾಗಿ ಅರ್ಥಮಾಡಿಕೊಳ್ಳಲಾಗಿದೆ; ಇದಕ್ಕೆ ಸಂಬಂಧಿಸಿದ ವಿವಿಧ ಎಣಿಕೆಗಳು ಮತ್ತು ವಿಚಾರ ಸರಣಿಗಳು ಸಂಪರ್ಕ ಕಳೆದುಕೊಂಡಿವೆ ಇಲ್ಲವೆ ಅನಿಶ್ಚಿತವಾಗಿವೆ. ಈ ಸಂಪರ್ಕ ಕಳೆದುಕೊಂಡ ಇಲ್ಲವೇ ಅನಿಶ್ಚಿತವಾದ ದೃಷ್ಟಿಕೋನವುಳ್ಳ ಬುನಾದಿಯ ಸಿದ್ಧಾಂತದ ಮೇಲೆ ಕಟ್ಟಲ್ಪಟ್ಟ ನಂಬಿಕೆಯು ಅನುಪಾತವಾಗಿ ದೃಢವಿಲ್ಲದ್ದೂ, ಬಲಹೀನವಾದುದ್ದೂ ಮತ್ತು ಅನಿಶ್ಚಿತವೂ ಆಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಈ ಪ್ರಮುಖವಾದ ಪ್ರಸ್ತಾಪವನ್ನು ದೇವರ ವಾಕ್ಯದಲ್ಲಿ ಅದಕ್ಕೆ ಹೊಂದಿಕೆಯಾಗಿರುವ ಎಲ್ಲಾ ಭವ್ಯತೆಯ ಅನುಪಾತದಲ್ಲಿ ಸ್ಪಷ್ಟವಾಗಿ ನೋಡುವುದಾದಲ್ಲಿ, ದೇವರ ರಕ್ಷಣಾ ಯೋಜನೆಯ ಬುನಾದಿಯಾಗಿ, ಇದು ನಂಬಿಕೆಯನ್ನು ಸರಿಯಾದ ತತ್ವಗಳಲ್ಲಿ ಬೇರೂರಿಸಿ, ಮೂಲೋಪಾಯ ಗೊಳಿಸಿ, ದೃಢವಾಗಿ ಸ್ಥಾಪಿಸುವುದಲ್ಲದೆ, ನಂಬಿಕೆಯ ಎಲ್ಲಾ ಸೂಕ್ಷ್ಮವಾದ ವಿವರಗಳ ಸತ್ಯ ಮತ್ತು ತಪ್ಪುಗಳನ್ನು ವಿವೇಚಿಸಿ ಬೇರ್ಪಡಿಸುವುದರಲ್ಲಿ ಇದು ಮಾರ್ಗದರ್ಶನ ಮಾಡುವುದಾಗಿದೆ. ಬುನಾದಿಯು ಸರಿಯಾಗಿ ಸ್ಥಾಪನೆಗೊಂಡಾಗ, ನಂಬಿಕೆಯ ಸಮಗ್ರ ರಚನೆಯು ಸಮರ್ಪಕವಾಗಿರುತ್ತದೆ ಹಾಗೂ ನಂಬಿಕೆಯ ಎಲ್ಲಾ ಅಂಶಗಳು ಬುನಾದಿಯ ಮೇಲೆ ಕರಾರುವಾಕ್ಕಾಗಿ ಹೊಂದಾಣಿಕೆಯಾದಾಗ ನಂಬಿಕೆಯ ವಿಶಿಷ್ಟ ವಿನ್ಯಾಸ ಸಂಪೂರ್ಣವಾಗಿರುತ್ತದೆ. ನಾವು ಮುಂದೆ ತೋರಿಸುವಂತೆ, ಪ್ರತಿಯೊಂದು ಸಿದ್ಧಾಂತ ಮತ್ತು ವಿಚಾರ ಸರಣಿಯನ್ನು ಈ ಓರೆಗಲ್ಲಿನ ಸಂಪರ್ಕಕ್ಕೆ ತರಬಹುದು ಮತ್ತು ಅದರಲ್ಲಿರುವ ಬಂಗಾರ ಅಥವಾ ಕಲ್ಮಶದ ಅನುಪಾತವನ್ನು ತ್ವರಿತವಾಗಿ ನಿರ್ಧರಿಸಬಹುದು.

ಪಾಪನಿವೃತ್ತಿಯ ಬಗ್ಗೆ ಎರಡು ಸಾಮಾನ್ಯವಾದ ದೃಷ್ಟಿಕೋನಗಳಿವೆ :–

(1) ಮೊದಲನೆಯುದನ್ನು 'ಸಾಂಪ್ರದಾಯಿಕ ದೃಷ್ಟಿಕೋನ'ವೆಂದು ತಿಳಿಯಬಹುದು. ಇದರಲ್ಲಿ ದೇವರ ನಿಯಮವನ್ನು ಉಲ್ಲಂಘಿಸಿದ ಮಾನವನು ದೇವರ ಶಾಪಕ್ಕೆ ತುತ್ತಾಗುತ್ತಾನೆ, 'ಕ್ರೋಧಕ್ಕೆ' ಒಳಗಾಗುತ್ತಾನೆ. ಮತ್ತು ಆ ದೇವರು ಪಾಪಿಯನ್ನು ಪಾಪಮುಕ್ತವನ್ನಾಗಿ ಮಾಡಲು ನ್ಯಾಯದ ದೆಸೆಯಿಂದ ತಡೆಹಿಡಿಯಲ್ಪಟ್ಟಿರುವಾಗ ಆತನಿಗೆ ಕ್ರಿಸ್ತನ ಸಮರ್ಪಣೆಯ ಮೂಲಕ ವಿಮೋಚನೆಯನ್ನು ಒದಗಿಸುತ್ತಾನೆ. ನ್ಯಾಯದ ಅಗತ್ಯತೆಯನ್ನು ಪೂರೈಸುವ ಮತ್ತು ಪಾಪಿಯುನ್ನು ಪುನಃ ದೇವರಿಗೆ ಅಂಗೀಕಾರಾರ್ಹನನ್ನಾಗಿ ಮಾಡುವ ಈ ಸಮಗ್ರ ಕ್ರಿಯೆಯನ್ನು "ಪಾಪನಿವಾರಣೆಯ ಕಾರ್ಯ"ವೆಂಬುದಾಗಿ ಹೆಸರಿಸಲಾಗಿದೆ.

(2) ಎರಡನೆಯುದನ್ನು ಪಾಪ ನಿವೃತ್ತಿಯು 'ಅಸಾಂಪ್ರದಾಯಿಕ' ಇಲ್ಲವೆ 'ಸಂಪ್ರದಾಯವಲ್ಲದ' ದೃಷ್ಟಿಕೋನವೆಂದು ಹೇಳಬಹುದು. (ಇದನ್ನು ಒಂದು ಕಾಲದಲ್ಲಿ ಮುಖ್ಯವಾಗಿ ಏಕೇಶ್ವರವಾದಿಗಳು ಮತ್ತು ಸಾರ್ವತ್ರಿಕವಾದಿಗಳು ಪ್ರತಿನಿಧಿಸುತ್ತಿದ್ದರು. ಇತ್ತೀಚೆಗೆ ಇದು ಕ್ರೈಸ್ತ ಪ್ರಪಂಚದ ಎಲ್ಲೆಡೆಗಳಲ್ಲಿ ವೇಗವಾಗಿ ಹಬ್ಬುತ್ತಿದೆ) ಇದು ಪ್ರಸ್ತಾಪವನ್ನು ವಿರುದ್ಧ ದಿಕ್ಕಿನಿಂದ ಸಮೀಪಿಸುತ್ತದೆ : ಇದು ದೇವರ ನ್ಯಾಯಕ್ಕೆ ಅಪರಾಧಿಗಳ ಪರವಾಗಿ ಯಾವುದೇ ತ್ಯಾಗದ ಅಗತ್ಯವಿಲ್ಲವೆಂದು ಮೊದಲೇ ಭಾವಿಸುತ್ತದೆ. ಇದು ಮರಣ ದಂಡನೆಯ ಯಾವುದೇ ವಿಶೇಷ ವಾಕ್ಯದಲ್ಲಿ ಕಂಡು ಬರುವ ದೇವರ ಕ್ರೋಧವನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಇದು 'ಶಾಪ'ವನ್ನೂ ನಿರ್ಲಕ್ಷಿಸುತ್ತದೆ. ದೇವರು ಮಾನವರ ಸಮೀಪಿಸುವಿಕೆಯನ್ನು ಬಯಸುತ್ತಾನೆ ಮತ್ತು ಅದಕ್ಕಾಗಿ

ಕಾಯುತ್ತಾನೆಂಬುದನ್ನು ಎತ್ತಿಹಿಡಿಯುತ್ತದೆ. ಇದರ ಮಾರ್ಗದಲ್ಲಿ ಯಾವುದೇ ಅಡಚಣೆಗಳನ್ನುಂಟು ಮಾಡುವುದಿಲ್ಲ, ಮಾನವರಿಗೆ ಪಾಪನಿವೃತ್ತಿಯ ಅವಶ್ಯಕತೆ ಇಲ್ಲ, ಮಾನವರು ಕೇವಲ ಪಾಪವನ್ನು ತೊರೆದುಬಿಡಬೇಕು ಮತ್ತು ನೀತಿಯನ್ನು ಬಯಸಬೇಕು. ಈ ರೀತಿಯಲ್ಲಿ ಅವರು ದೇವರ ಸಾಮರಸ್ಯಕ್ಕೆ ಬರುತ್ತಾರೆ. ದೇವರೊಂದಿಗೆ ಒಂದಾಗುತ್ತಾರೆ (At-one with God) ಎಂದು ಹೇಳುತ್ತದೆ. ಈ ಕಾರಣದಿಂದ ಈ ದೃಷ್ಟಿಕೋನಕ್ಕೆ ಸಾಮಾನ್ಯವಾಗಿ At-one-ment ಎಂಬ ವಾಗ್ದೋರಣೆ ನೀಡಲಾಗಿದೆ. ಇದು ಮಾನವರು ಯಾವ ಪದ್ಧತಿಯಿಂದ ಇದಕ್ಕೆ ಒಳಗಾಗಿದ್ದಾರೆ ಎಂಬುದಕ್ಕೆ ಒತ್ತುಕೊಡದೆ ಧರ್ಮನೀತಿಯೊಂದಿಗೆ ಸಾಮರಸ್ಯವನ್ನು ಸೂಚಿಸುವುದಾಗಿದೆ ಎಂದು ತಿಳಿಯಲಾಗಿದೆ. ಪಾಪನಿವೃತ್ತಿಯನ್ನು ಪಾಪಿಯು ತಾನೇ ದಂಡ ತೆರುವ ದೃಷ್ಟಿಕೋನದಿಂದ ಇಲ್ಲವಾದಲ್ಲಿ ದೇವರಿಂದ ಷರತ್ತಿಲ್ಲದ ಕ್ಷಮಾಪಣೆ ಎಂದು ಪರಿಗಣಿಸಲಾಗುವುದು. ಈ ದೃಷ್ಟಿಕೋನದಿಂದ ನಮ್ಮ ಕರ್ತನಾದ ಯೇಸು ಮತ್ತು ಆತನ ಅನುಯಾಯಿಗಳೆಲ್ಲರೂ ಪಾಪನಿವೃತ್ತಿಯಲ್ಲಿ ಭಾಗಿಗಳಾಗಿದ್ದಾರೆ. ಅಂದರೆ ಅವರು ಮಾನವರಿಗೆ ಬೋಧಿಸಿದ್ದಾರೆ ಮತ್ತು ಅವರನ್ನು ಪಾಪದಿಂದ ನೀತಿಯ ಕಡೆಗೆ ತಿರುಗಿಕೊಳ್ಳಲು ಎಚ್ಚರಿಸಿದ್ದಾರೆ. ಇದು ಯಾವುದೇ ದೋಷ ಪರಿಹಾರ ಅಥವಾ ಈಡುಬಲಿ ಇಲ್ಲ ಎಂಬ ಅರ್ಥದಲ್ಲಿ.

(3) ಈ ದೃಷ್ಟಿಕೋನವನ್ನು ನಾವು ಪರಿಶುದ್ಧ ಗ್ರಂಥದ ದೃಷ್ಟಿಕೋನವೆಂಬುದಾಗಿ ಒಪ್ಪಿಕೊಳ್ಳುತ್ತೇವೆ. ಆದರೆ ಇದು ಸಾಮಾನ್ಯವಾಗಿ ನಿರ್ಲಕ್ಷಿಸಿರುವ ಎರಡೂ ದೃಷ್ಟಿಕೋನಗಳನ್ನು Theologian = ಮತಧರ್ಮ ಶಾಸ್ತ್ರಜ್ಞರು, ವೇದ ಪಂಡಿತರುಗಳು ಅಂಗೀಕರಿಸಿ ಆಸಕ್ತಿಯಿಂದ ಸೇರಿಸಲಾಗಿದೆ. ಪಾಪನಿವೃತ್ತಿಯ ಬಗ್ಗೆ ಸತ್ಯವೇದದ ಬೋಧನೆಯು, ನಾವು ತೋರಿಸಲು ಪ್ರಯತ್ನಿಸುವಂತೆ ನಮಗೆ ಸ್ಪಷ್ಟವಾಗಿ ಬೋಧಿಸುವುದೇನೆಂದರೆ :–

(ಅ) ಮಾನವನನ್ನು ದೇವರ ಸ್ವರೂಪದಲ್ಲಿ ಸಮರ್ಪಕವಾಗಿ ಉಂಟುಮಾಡಲಾಯಿತು. ಆದರೆ ಆತನು ಇಚ್ಛಾಪೂರ್ವಕವಾಗಿ ತೋರಿದ ಅವಿಧೇಯತೆಯ ಕಾರಣ ಅಲ್ಲಿಂದ ಬಿದ್ದುಹೋದನು ಮತ್ತು ಕ್ರೋಧದ ತೀರ್ಪಿಗೆ ಅಂದರೆ ಶಾಪಕ್ಕೆ ತುತ್ತಾದನು. ಈ ರೀತಿಯಲ್ಲಿ ಇಡೀ ಜನಾಂಗವು ಕ್ರೋಧಕ್ಕೆ ಗುರಿಯಾದ ಮಕ್ಕಳಾದರು – ಎಫೆಸ 2:3.

(ಆ) ದೇವರು ಆತನ ಅವಿಧೇಯ ಸೃಷ್ಟಿಯ ವಿರುದ್ಧ ನ್ಯಾಯ ತೀರ್ಪನ್ನು ಅಂದರೆ ಮರಣವನ್ನು ಕರುಣೆಯಿಲ್ಲದೆ ನಾಲ್ಕು ಸಾವಿರ ವರ್ಷಗಳಿಗೂ ಹೆಚ್ಚುಕಾಲದಿಂದ ವಿಧಿಸುತ್ತಿದ್ದಾಗ್ಯೂ, ಪರಂತು ಆತನ ನ್ಯಾಯ ಮತ್ತು ನೀತಿಯ ತತ್ವಕ್ಕೆ ನಿಷ್ಠೆಯಿಂದ ಬೆರೆತಿರುವಾಗ ಪ್ರೀತಿ ಮತ್ತು ಅನುಕಂಪವು ನೀತಿಯ ಕಡೆಗೆ ಬದಲಿ ವ್ಯವಸ್ಥೆ ಅಥವಾ ರಕ್ಷಣೆಯ ಯೋಜನೆಯಾಗಿ ತೋರಿಬಂತು. ಇದರಿಂದ ದೇವರು ತನ್ನ ನೀತಿಯನ್ನು ತೋರಿಸಿ ತಾನು ನೀತಿಸ್ವರೂಪನಾಗಿಯೂ ಮತ್ತು ಯೇಸು ಕ್ರಿಸ್ತನನ್ನು ನಂಬುವವರಿಗೆ ನೀತಿವಂತರೆಂದು ನಿರ್ಣಯಿಸುವನು (ರೋಮಾಪುರ 3:26 ನೋಡಿರಿ). ಈ ಯೋಜನೆಯಿಂದ ದಂಡನೆಗೊಳಗಾದವರೆಲ್ಲರೂ ನ್ಯಾಯದ ಉಲ್ಲಂಘನೆಯಾಗದಂತೆ, ಇದರಿಂದ ದೇವರ ಪ್ರೀತಿ, ಜ್ಞಾನ ಮತ್ತು ಶಕ್ತಿಯನ್ನು ವ್ಯಕ್ತಗೊಳಿಸುವ ಸರ್ವಶಕ್ತನನ್ನು ಗೌರವಿಸುವಂತೆ, ಮತ್ತು ಆತನ ಎಲ್ಲಾ ಸೃಷ್ಟಿಗಳಿಗೆ ಅಂದರೆ ಮಾನವರು ಮತ್ತು ದೇವದೂತರುಗಳಿಗೆ ಆಶೀರ್ವಾದವುಂಟಾಗುವಂತೆ ತಮ್ಮ ವಿರುದ್ಧವಾದ ತೀರ್ಪಿನಿಂದ ಬಿಡುಗಡೆ ಹೊಂದಿಕೊಳ್ಳಬಹುದು. ಇದರಿಂದ ದೇವರ ಬಗೆ ಬಗೆಯ ಕೃಪೆ ಮತ್ತು ಜ್ಞಾನವು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಪೂರ್ಣಪ್ರಮಾಣದಲ್ಲಿ ಬಹಿರಂಗಪಡುವುದು. – ಎಫೆಸ 3:10.

(ಇ) ಮೂಲ ತಂದೆ ಆದಾಮನು ದೇವರ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಕ್ಕೆ ಈ ಪಾಪ ನಿವೃತ್ತಿಯ ಕಾರ್ಯಕ್ರಮವನ್ನು ಜಾರಿಗೊಳಿಸುವಾಗ ನಮ್ಮ ಪ್ರೀತಿಯ ವಿಮೋಚಕನು ಮರಣಪಟ್ಟನು – ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು – 1 ತಿಮೋ. 2:6.

(ಈ) ಆದರೆ ಪಾಪಗಳಿಗೆ ನೀಡಿದ ಬಲಿಗಳು ನ್ಯಾಯದ ಭಾದ್ಯತೆಗೆ ತೃಪ್ತಿಗೊಳಿಸದ ಹೊರತಾಗಿ ಪಾಪ ನಿವೃತ್ತಿಯ ಕಾರ್ಯವನ್ನು ಪೂರ್ಣಗೊಳಿಸಲಿಲ್ಲ. ನ್ಯಾಯಕ್ಕೆ ಅರ್ಪಿಸಿದ ಈಡಿನ ಸದ್ಗುಣದಿಂದಾಗಿ ಮಾನವನ ಲೆಕ್ಕದ ವರ್ಗಾವಣೆ ಆಯಿತು, ಮತ್ತು ಆತನ ಪ್ರಕರಣ, ಆತನ ಋಣಬದ್ಧತೆ ಮುಂತಾದವುಗಳು ಆದಾಮನ ಮತ್ತು ಆತನ ಸಂತತಿಯವರ ವಿರುದ್ಧವಾದ ಎಲ್ಲಾ ಹಕ್ಕುಗಳನ್ನು ನ್ಯಾಯಕ್ಕೆ ಸಂಪೂರ್ಣವಾಗಿ ತೃಪ್ತಿಯಾಗುವಂತೆ ಸಲ್ಲಿಸಿದ ನಮ್ಮ ಕರ್ತನಾದ ಯೇಸುಕ್ರಿಸ್ತನ ಖಾತೆಗೆ ವರ್ಗಾಯಿಸಲ್ಪಟ್ಟಿತು. ಈ ರೀತಿಯಲ್ಲಿ ಯೇಸುವು ತನ್ನ ಸ್ವಂತ ಅಮೂಲ್ಯವಾದ ರಕ್ತದ ಮೂಲಕ 'ಕೊಂಡುಕೊಂಡ' ಪರಿಣಾಮವಾಗಿ ಆತನು ಈಗ ಎಲ್ಲರ ಒಡೆಯನೂ, ಪ್ರಭುವೂ, ಕರ್ತನೂ ಆಗಿದ್ದಾನೆ – ರೋಮಾಪುರ 14:9.

(ಉ) ಆದಾಮ ಮತ್ತು ಆತನ ಸಂತತಿಯವರಿಗಾಗಿ ಮಾಡಿದ ಈ ವ್ಯವಸ್ಥೆಯ ಒಂದು ಉದ್ದೇಶ ಅವರ ಮರಣ ದಂಡನೆಯನ್ನು ರದ್ದುಪಡಿಸುವುದು. ಅದು ಇರುವವರೆಗೂ ದಂಡನೆಗೊಳಗಾದವರನ್ನು ಬಿಡಿಸುವ ಪ್ರೀತಿಯ ಯಾವ ಪ್ರಯತ್ನಕ್ಕೂ ಅಡ್ಡಿಪಡಿಸುವುದಾಗಿತ್ತು ಮತ್ತು ಅವರ ಭವಿಷ್ಯತ್ ಜೀವಿತದ ಎಲ್ಲಾ ಪರಿಸ್ಥಿತಿಗಳನ್ನು ಕಿತ್ತುಹಾಕುವುದು ಇಲ್ಲವೇ ನಾಶಪಡಿಸುವುದಾಗಿತ್ತು.

(ಊ) ಮತ್ತೊಂದು ಉದ್ದೇಶವೆಂದರೆ, ಪತನಗೊಂಡ ಸಂತತಿಯವರನ್ನು ದೇವರ ನ್ಯಾಯದ ಆಚೆಕಡೆಗೆ, ಕ್ರಿಸ್ತನ ವಿಶೇಷವಾದ ಮೇಲ್ವಿಚಾರಣೆಯ ಅಡಿಯಲ್ಲಿ ಇಡುವುದು. ಆತನು ದೇವರ ಯೋಜನೆಯ ಪ್ರತಿನಿಧಿಯಾಗಿ ನ್ಯಾಯದ ಹಕ್ಕು ಕೇಳಿಕೆಗಳನ್ನು ತೃಪ್ತಿಪಡಿಸ ಬಯಸುವುದು ಮಾತ್ರವಲ್ಲ, ಪತನಗೊಂಡ ಜನಾಂಗದ ಅನೇಕರು ನ್ಯಾಯದೊಂದಿಗೆ ಸಾಮರಸ್ಯಗೊಳ್ಳುವ ಅಭಿಲಾಷೆಯಿರುವವರಿಗೆ ಬೋಧಿಸುವುದಕ್ಕೂ, ತಿದ್ದುವುದನ್ನು, ಪುನಃವಶಪಡಿಸುವುದನ್ನು ಕೈಗೊಳ್ಳುತ್ತಾನೆ. ಕಡೆಗೆ ಆತನು ಅವರನ್ನು ದೈವಿಕ ನ್ಯಾಯದ ನಿಯಮಗಳಿಗೆ ತಿರುಗಿಸುತ್ತಾನೆ. ಅವರು ಪರಿಪೂರ್ಣರಾಗಿ ಅವರ ಸಮರ್ಪಕವಾದ ಅಗತ್ಯತೆಗಳನ್ನು ಸಹಿಸಿಕೊಳ್ಳಲು ಶಕ್ತನಾಗುತ್ತಾರೆ.

(ಋ) ಮೂಲದಲ್ಲಿ ಮಾನವರಿಗೂ ದೇವರಿಗೂ ಒಂದೇ ಬೇರ್ಪಡಿಸುವ ಪ್ರಭಾವವು ದೈವಿಕ ದಂಡನೆಯಾಗಿತ್ತು, ಈಗ ಕೆಟ್ಟ ಕಾರ್ಯಗಳ ದೆಸೆಯಿಂದ ಆರು ಸಾವಿರ ವರ್ಷಗಳ ಬೀಳುವಿಕೆ, ಅವನತಿ ಮತ್ತು ದೇವರೊಡನೆ ಪರಕೀಯತೆ ಇವುಗಳನ್ನು ಅನುಭವಿಸಿದ ನಂತರ – ಅಜ್ಞಾನ, ಮೂಢನಂಬಿಕೆ ಮತ್ತು ವಿರೋಧಿಯ ತಂತ್ರೋಪಾಯಗಳ ಕಾರಣದಿಂದಾಗಿ ಮತ್ತು ದೇವರ ಗುಣಲಕ್ಷಣ ಹಾಗೂ ಯೋಜನೆಗಳನ್ನು ಮಾನವರಿಗೆ ತಪ್ಪಾಗಿ ತಿಳಿಸಿಕೊಟ್ಟ ಕಾರಣ ದೇವರ ಕೃಪೆ ಮತ್ತು ಕ್ಷಮಾಪಣೆಗಳ ಸಂದೇಶಕ್ಕೆ ಗಮನ ಕೊಡದಿರುವುದನ್ನು ನಾವೀಗ ಕಾಣುತ್ತೇವೆ. ಈಡುಬಲಿಯು ಅಂಗೀಕಾರ ವಾಗಿರುವುದರಿಂದ ದೇವರು ಕ್ರಿಸ್ತನ ತ್ಯಾಗದ ಅರ್ಹತೆಯ ಮೇರೆಗೆ ಈಗ ಪಾಪಿಗಳನ್ನು ಮುಕ್ತವಾಗಿ ತನ್ನ ಸಾಂಗತ್ಯಕ್ಕೆ, ನಿತ್ಯಜೀವಕ್ಕೆ ಸೇರಿಸಿಕೊಳ್ಳುವುದನ್ನು ಪ್ರಕಟಿಸುತ್ತಾನೆ. ಪರಂತು, ಮಾನವರಲ್ಲಿ ಹೆಚ್ಚಿನವರು ಶುಭಸಮಾಚಾರವನ್ನು ನಂಬುವುದರಲ್ಲಿ ನಿಧಾನಿಗಳಾಗಿದ್ದು ಅಲ್ಲದೇ ಅವರ ಪರಿಸ್ಥಿತಿಗಳನ್ನು ಒಪ್ಪಿಕೊಳ್ಳಲೂ ನಿಧಾನವಾಗಿರುತ್ತಾರೆ. ಕೆಲವರು ಸೈತಾನನ ಮಿಥ್ಯಾವಾದದ ಕಾರಣ ಮೋಸಹೋಗುತ್ತಾರೆ. ಈ ರೀತಿಯಲ್ಲಿ ಆತನು ಎಲ್ಲಾ ಜನಾಂಗದವರನ್ನು ಅವರು ದೇವರೇ ಇಲ್ಲವೆಂದು ಹೇಳುವ ಮಟ್ಟಿಗೆ ಮರಳುಗೊಳಿಸುವವನಾಗಿದ್ದಾನೆ (ಪ್ರಕಟನೆ 20:3 ನೋಡಿರಿ); ಇತರರು ಆತನನ್ನು ಪ್ರೀತಿ ಮತ್ತು ಅಂತಃಕರಣಗಳಿಲ್ಲದ, ಅವರನ್ನು ನಿರಂತರವಾಗಿ ಪೀಡಿಸಲು ಅಣಿಯಾಗಿರುವವನೂ ಕಾತರನೂ ಆದ ಮಹಾ ವಿರೋಧಿಯೆಂದು ನಂಬುತ್ತಾರೆ; ಮತ್ತೆ ಕೆಲವರು ದೇವರ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ ತಮಗೆ ತಲುಪಿದ ಬಾಬೆಲ್‌ನ ಘರ್ಷಣೆಯ ವರದಿ ಕಾರಣ ಗೊಂದಲಕ್ಕೊಳಗಾಗಿದ್ದಾರೆ ಮತ್ತು ಯಾವುದನ್ನು ನಂಬಬೇಕೆಂದು ತಿಳಿಯದೇ ಹೋಗಿದ್ದಾರೆ. ದೇವರ ಬಳಿಗೆ ಹೋಗಲು ಬಯಸುವರಾದರೂ ಅವರ ಅಂಜಿಕೆಯ ಮತ್ತು ಅಜ್ಞಾನದ ಕಾರಣ ತಡೆಹಿಡಿಯಲ್ಪಟ್ಟಿದ್ದಾರೆ. ಇದರ ಪರಿಣಾಮವಾಗಿ, ವಾಸ್ತವವಾಗಿ, ಕ್ರಿಸ್ತನ ಮೂಲಕ ದೇವರ ಬಳಿಗೆ ಹೋಗುವವರ ಸಂಖ್ಯೆ ಅಲ್ಪವಾಗಿದೆ – ಅದು "ಚಿಕ್ಕ ಹಿಂಡು" ಆಗಿದೆ.

(ಎ) ಪರಂತು, ಪಾಪಕ್ಕಾಗಿ ಅರ್ಪಿಸಿದ ಬಲಿಯು ಕೆಲವರಿಗಾಗಿ ಅಲ್ಲ, ಹೆಚ್ಚಿನವರಿಗಾಗಿ, ಎಲ್ಲರಿಗಾಗಿಯೂ. ದೇವರ ಯೋಜನೆಯ ಭಾಗವೆಂದರೆ, ಯಾವಾತನು ಎಲ್ಲರನ್ನೂ ತನ್ನ ಪರಿಶುದ್ಧ ರಕ್ತದ ಮೂಲಕ ವಿಮೋಚಿಸಿದನೋ ಆತನೇ ಅಂತ್ಯದಲ್ಲಿ ಎಲ್ಲಾ ಜನರೂ, ಪ್ರತಿಯೊಂದು ಸೃಷ್ಟಿಯೂ ದೇವರ ಕೃಪೆಯ ಮೂಲಕ ದೊರೆಯುವ ಉತ್ತಮ ಭಾಗ್ಯಗಳ ಶುಭಸಮಾಚಾರವನ್ನು ತಿಳಿದುಕೊಳ್ಳುವಂತೆ ಮತ್ತು ಪಾಪ ನಿವಾರಣೆಯ ಮೂಲಕ ತಮ್ಮ ಸೃಷ್ಟಿಕರ್ತನ ಸನ್ನಿಧಿಗೆ ಒಂದಾಗಲು ಹಿಂತಿರುಗುವಂತೆ ಮಾಡುವನು.

(ಏ) ಇದುವರೆಗೆ, ಕೇವಲ ಸಭೆಯು ಮಾತ್ರವೇ ಪಾಪ ನಿವೃತ್ತಿಯಿಂದ ಪರೋಕ್ಷವಾಗಿ ಲಾಭ ಹೊಂದಿದೆ ; ಆದರೆ, ಸತ್ಯವೇದದ ಬೋಧನೆ ಏನೆಂದರೆ, ಸಭೆಯು ಒಂದು ಯಾಜಕರ ರಾಜ್ಯವಾಗಿ ರಚನೆಗೊಳ್ಳುತ್ತದೆ ಅಥವಾ ಅವರು 'ರಾಜವಂಶಸ್ಥ ಯಾಜಕರು' ರಾಜವಂಶಸ್ಥ ಮಹಾಯಾಜಕನಾದ ಯೇಸುಕ್ರಿಸ್ತನೊಂದಿಗೆ ರಾಜವಂಶಸ್ಥ ಯಾಜಕವರ್ಗ ದವರಾಗಿರುತ್ತಾರೆ. ಸಹಸ್ರ ವರ್ಷಗಳ ಕಾಲದಲ್ಲಿ ಈ ಪರಲೋಕ ರಾಜ್ಯದ ವರ್ಗದವರು. ಈ ರಾಜವಂಶ ಯಾಜಕ ವರ್ಗದವರು ಮಾನವ ಜಾತಿಯವರಿಗೆ ಸೈತಾನನು, ತಪ್ಪು ದೋಷಗಳು ಮತ್ತು ಅವನತಿಗಳನ್ನು ಉಂಟುಮಾಡಿದ್ದ ಅಂಧಕಾರವನ್ನು ಪೂರ್ಣವಾಗಿ ಮತ್ತು ಸಮಗ್ರವಾಗಿ ನಿವಾರಿಸುವ ಕಾರ್ಯದಲ್ಲಿ ಯಶಸ್ವಿಯಾಗುವರು ಮತ್ತು ಪಾಪನಿವಾರಣೆಯ ಇಚ್ಛೆಯುಳ್ಳ ಈ ಲೋಕದ ಎಲ್ಲಾ ಕುಟುಂಬಗಳನ್ನೂ ದೇವರ ಪೂರ್ಣ ಸಂಧಾನಕ್ಕೆ ತರುವರು.

(ಐ) ಇದಕ್ಕೆ ಸಾಮರಸ್ಯವಾಗುವಂತೆ ನಾವು, ವಿಶ್ವಾಸಿಗಳು, ಸಭೆಯು ಪಾಪನಿವೃತ್ತಿಯನ್ನು ಹೊಂದಿಕೊಂಡಿದ್ದೇವೆಂದು ಅಪೋಸ್ತಲರ ಹೇಳಿಕೆಗಳಿವೆ. ದೇವರ ಪ್ರಕಾರವಾಗಿ ಈ ಪಾಪ ನಿವೃತ್ತಿಯ ಕಾರ್ಯವು ಹದಿನೆಂಟು ಶತಮಾನಗಳ ಹಿಂದೆಯೇ ನೇರವೇರಿದೆ. ಅದು ಎಲ್ಲರಿಗಾಗಿ; ಆದರೆ ದೇವರು ಒದಗಿಸಿರುವ ಅವಕಾಶಗಳನ್ನು ಅಂಗೀಕರಿಸುವುದರ ಅರ್ಥದಲ್ಲಿ ನಂಬಿಗಸ್ತರು ಮಾತ್ರವೇ ಅದನ್ನು ಹೊಂದಿ ಕೊಂಡಿದ್ದಾರೆ. ಉಳಿದ ಮಾನವ ಜಾತಿಯವರು ಕುರುಡಾಗಿದ್ದಾರೆ – "ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" – 2 ಕೊರಿ. 4:4.

(ಒ) ಈ ಆಲೋಚನೆಗೆ ಸಾಮರಸ್ಯವಾಗುವಂತೆ ಸತ್ಯವೇದದ ಇತರ ಹೇಳಿಕೆಯೂ ಇದೆ. ಯುಗಾಂತರ ಕಾಲದ ರಾಜ್ಯಭಾರಕ್ಕೆ ಸಂಬಂಧಿಸಿದಂತೆ ಕ್ರಿಸ್ತನ ಪ್ರಥಮ ಕಾರ್ಯವು ಸೈತಾನನನ್ನು ಬಂಧಿಸಿ ಅಥವಾ ಹತೋಟಿಯಲ್ಲಿಟ್ಟು, ಆತನು ಜನಾಂಗಗಳನ್ನು ಇನ್ನು ಮುಂದೆ ಸಾವಿರ ವರ್ಷಗಳವರೆಗೆ ಮೋಸಗೊಳಿಸದಂತೆ ಮಾಡುವನು (ಪ್ರಕಟನೆ 20:3 ನೋಡಿರಿ). ದೇವರ ರಾಜ್ಯವು ಈ ಭೂಮಿಯ ಮೇಲೆ ಸ್ಥಾಪಿತವಾಗುವಾಗ ನೀರು ಆಳವಾದ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಳ್ಳುವಂತೆ ದೇವರ ಜ್ಞಾನವು ಈ ಭೂಮಿಯನ್ನೆಲ್ಲಾ ಆವರಿಸಿಕೊಳ್ಳುವುದು ಎಂಬುದಾಗಿ ಅನೇಕ ಪ್ರವಾದನೀಯ ಹೇಳಿಕೆಗಳಿವೆ. ಅಗ ಯಾರೂ ತನ್ನ ನೆರೆಯವನಿಗೆ "ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸ ಬೇಕಾಗಿರುವುದಿಲ್ಲ" (ಇಬ್ರಿಯ 8:11) ಮತ್ತು ಕರ್ತನ ಪ್ರಾರ್ಥನೆಯಲ್ಲಿನ ವಿಜ್ಞಾಪನೆಯಾದ "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂದು ಹೇಳಬೇಕಾಗುವುದಿಲ್ಲ. ಯಾಕೆಂದರೆ, ಇದು ಅಪೋಸ್ತಲನು ಹೇಳುವಂತೆ "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ" ಸತ್ಯದ ಜ್ಞಾನಕ್ಕೆ ಎಲ್ಲರೂ ಸೇರಬೇಕೆಂಬುದು ದೇವರ ಚಿತ್ತವಾಗಿದೆ ಎಂಬ ಅರ್ಥ ನೀಡುತ್ತದೆ – 1 ತಿಮೋ. 2:4.

(ಓ) ಪಾಪ ನಿವೃತ್ತಿಯು ತನ್ನ ಎರಡೂ ಹಂತಗಳಲ್ಲಿ – ನ್ಯಾಯವನ್ನು ತೃಪ್ತಿಪಡಿಸುವುದು ಮತ್ತು ಸಾಮರಸ್ಯಕ್ಕೆ ಹಿಂತಿರುಗಿಸುವುದು ಅಥವಾ ಆತನ ಅನೇಕ ಸೃಷ್ಟಿಗಳು ದೇವರೊಂದಿಗೆ ರಾಜಿ–ಸಂಧಾನ (At-one-ment) ಹೊಂದಿಕೊಳ್ಳುವುದು, ಪೂರ್ಣ ಪ್ರಕಾಶ ಮತ್ತು ಜ್ಞಾನದ ಅಡಿಯಲ್ಲಿ ನೂತನ ಒಡಂಬಡಿಕೆ ಸಕಲ ಸೌಭಾಗ್ಯಗಳನ್ನು ಪಡಕೊಳ್ಳುವುದು – ಇವುಗಳು ಮಿಲೆನಿಯಂ (ಸಹಸ್ರ ವರ್ಷಾಳ್ವಿಕೆ) ಅಂತ್ಯದಲ್ಲಿ ನೆರವೇರುವುದು, ಕ್ರಿಸ್ತನ ಮೂಲಕ ಅನುಗ್ರಹಿಸಲ್ಪಟ್ಟ ದೇವರ ಕೃಪೆಯನ್ನು ಇಚ್ಛಾಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ ನಿರಾಕರಿಸುವ ಪ್ರತಿಯೊಬ್ಬನೂ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವಾಗ ಮುಕ್ತಾಯವಾಗುವುದು – "ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನೂ ನಮ್ಮ ಜನರಿಂದ ಸಂಪೂರ್ಣವಾಗಿ ನಾಶವಾಗುವನು". ಆ ನಿತ್ಯನಾಶನದಿಂದ ಮತ್ತೆ ಹಿಂತಿರುಗಲು ಪುನರುತ್ಥಾನವಿಲ್ಲ – ಅ.ಕೃ. 3:23: 2 ಥೆಸ. 1:9.

(ಔ) ಆಗ ಪಾಪನಿವೃತ್ತಿಯೆಂಬ ಮಹಾ ಕಾರ್ಯವು ಸಂಪೂರ್ಣಗೊಳ್ಳುವುದು ಮತ್ತು ಭೂಪರಲೋಕ ಗಳಲ್ಲಿರುವ ಎಲ್ಲವುಗಳೂ ದೇವರ ಸಾಮರಸ್ಯದಲ್ಲಿರುವುದು ಕಂಡುಬರುವುದು. ಅವರೆಲ್ಲರೂ ಯೇಸುಕ್ರಿಸ್ತನ ಮೂಲಕ ತೋರಿಬಂದ ದೇವರ ಔದಾರ್ಯ ಮತ್ತು ಕೃಪೆಗಳಿಗಾಗಿ ದೇವರನ್ನು ಸ್ತುತಿಸುವರು; ಇನ್ನುಮುಂದೆ ಮರಣವೆಂಬುದು ಇರುವುದಿಲ್ಲ; ನಿಟ್ಟುಸಿರು ಇನ್ನು ಇಲ್ಲವಾಗುವುದು, ಅಲ್ಲಿ ಯಾವ ಬೇನೆಯೂ ಇರುವುದಿಲ್ಲ. ಮೊದಲಿದ್ದದ್ದೆಲ್ಲಾ ಇಲ್ಲದೇ ಹೋಗುವುದು – ಯಾಕೆಂದರೆ ನಮ್ಮ ವಿಮೋಚಕನ ತ್ಯಾಗಬಲಿಯ ಮೂಲಕ ನ್ಯಾಯವನ್ನು ಸಮಾಧಾನಪಡಿಸುವುದರಿಂದ ಪ್ರಾರಂಭಗೊಂಡ ಪಾಪನಿವೃತ್ತಿಯ ಕಾರ್ಯದ ಫಲದಿಂದಾಗಿ ನಿತ್ಯಜೀವಕ್ಕೆ ಅರ್ಹರಾದವರೆಂದು ಕಂಡು ಬರುವವರ ಪೂರ್ಣ ಸಂಧಾನದಲ್ಲಿ ಹಳೆಯ ಸಂಗತಿಗಳೆಲ್ಲಾ ಮುಕ್ತಾಯವಾಗವವು.

ಹೀಗಿದ್ದಾಗ್ಯೂ, ಪಾಪ ನಿವೃತ್ತಿ ಎಂಬ ಪದವನ್ನು ನೋಡುವಾಗ, ದೇವರ ಮತ್ತು ಮನುಷ್ಯರ ನಡುವೆ ಇದರ ಉಪಯೋಗವು ಸೃಷ್ಟಿಕರ್ತ ಮತ್ತು ಸೃಷ್ಟಿಯ ನಡುವೆ ಅಸ್ಥಿತ್ವದಲ್ಲಿ ಇರುವ ಕಷ್ಟ, ವ್ಯತ್ಯಾಸ, ವಿರೋಧಗಳನ್ನು ಸೂಚಿಸುತ್ತವೆಂದು ಗ್ರಹಿಸಿಕೊಳ್ಳಬೇಕು – ಇಲ್ಲವಾದಲ್ಲಿ ಅವುಗಳು ಒಂದೇ ಆಗಿರುತ್ತವೆ. ಪಾಪನಿವೃತ್ತಿಯ ಕಾರ್ಯದ ಅವಶ್ಯಕತೆ ಎರಡೂ ದೃಷ್ಟಿಕೋನದಲ್ಲಿ ಇರುವುದಿಲ್ಲ. ಇಲ್ಲಿ ವಿಶೇಷವಾಗಿ ನಾವು ಸತ್ಯವೇದ ಮತ್ತು ವಿಕಾಸವಾದ ಎಂಬ ಆಧುನಿಕ ಸಿದ್ಧಾಂತದ ನಡುವೆ ಇರುವ ತೀಕ್ಷ್ಣವಾದ ತಿಕ್ಕಾಟವನ್ನು ಗ್ರಹಿಸುತ್ತೇವೆ. ಇದು ವಿಶಿಷ್ಟವಾಗಿ ಕಳೆದ ನೂರಾರು ವರ್ಷಗಳಲ್ಲಿ ವಿವಿಧ ಪಂಗಡಗಳಿಗೆ ಸೇರಿದ ಎಲ್ಲಾ ಕ್ರೈಸ್ತರ ವಿಶ್ವಾಸವನ್ನು ಭೇದಿಸಿದೆ. ಇದು ತಾನಾಗಿ ಕ್ರೈಸ್ತ ಪ್ರಪಂಚದ ವೇದ ವಿದ್ಯಾಲಯಗಳಲ್ಲಿ ಮತ್ತು ಪ್ರಮುಖ ಪ್ರಸಂಗ ಪೀಠಗಳಲ್ಲಿ ಗುರುತರವಾಗಿ ತೋರಿಬರುತ್ತಿದೆ.

ವಿಕಾಸವಾದವು ಮಾನವನ ಪತನವಾಗಿರುವುದನ್ನು ಅಲ್ಲಗಳೆಯುತ್ತದೆ. ಆತನು ಎಂದಾದರೂ ದೇವರ ಸ್ವರೂಪದಲ್ಲಿದ್ದನೆಂಬುದನ್ನೂ ನಿರಾಕರಿಸುತ್ತದೆ. ಆತನು ಎಂದಾದರೂ ನ್ಯಾಯಾಸ್ಥಾನದ ಮುಂದೆ ನಿಂತುಕೊಳ್ಳಲು ಸಮರ್ಥನಾಗಿದ್ದನು ಎಂಬುದನ್ನು, ನಂತರ ಆತನ ಅವಿಧೇಯತೆಯ ದೆಸೆಯಿಂದ ಮರಣ ಶಿಕ್ಷೆಗೆ ಒಳಗಾದನು ಎಂಬುದನ್ನು ಅದು ಒಪ್ಪಿಕೊಳ್ಳುವುದಿಲ್ಲ. ಮರಣವು ಶಿಕ್ಷೆ ಎನ್ನುವುದಕ್ಕಿಂತ ವಿಕಾಸನಾ ಪ್ರಕ್ರಿಯೆಯ ಮತ್ತೊಂದು ಹಂತ ಎಂಬುದಾಗಿ ಅದು ಹೇಳಿಕೊಳ್ಳುತ್ತದೆ. ಮಾನವನು ದೇವರ ಹೋಲಿಕೆಯಿಂದ ಪಾಪಕ್ಕೆ ಮತ್ತು ಅವನತಿಗೆ ಬೀಳುವುದಕ್ಕಿಂತ, ಆತನು ಮಂಗನ ಸ್ಥಿತಿಯಿಂದ ಮಾನವ ಸ್ಥಿತಿಗೆ ಹೆಚ್ಚುಕಡಿಮೆ ದೇವರ ಹೋಲಿಕೆಗೆ ಏರಿಹೋಗಿದ್ದಾನೆಂದು ಅದು ಹೇಳಿಕೊಳ್ಳುತ್ತದೆ. ಅದರ ತರ್ಕಬದ್ಧವಾದ ಮುಂದಿನ ಹೆಜ್ಜೆಯೆಂದರೆ, ಮಾನವರು ಕೆಳಗಿನ ಸ್ಥಿತಿಯಿಂದ ಮೇಲಣ ಸ್ಥಿತಿಗೆ ಏರದಂತೆ ಮಾಡುವ ದೇವರ ದಂಡನೆಯಲ್ಲಿ ಯಾವುದೇ ನ್ಯಾಯವಿದೆ ಎಂದೂ, ಮಾತ್ರವಲ್ಲದೆ ಅಂಥಾಃ ಬಲಿಯ ಅವಶ್ಯಕತೆ ಇರುವ ಯಾವ ಪಾಪವನ್ನೂ ಮಾಡದೇ ಇರುವಾಗ ಈ ನ್ಯಾಯವು ಪಾಪ ಪ್ರಾಯಶ್ಚಿತ್ತ ಬಲಿಯೊಂದನ್ನು ಕೇಳುವುದು ಎಂಬುದನ್ನು

ಅದು ಒಪ್ಪಿಕೊಳ್ಳುವುದಿಲ್ಲ. ಸುಸಂಗತವಾದ ರೀತಿಯಲ್ಲಿ ಈ ಆಲೋಚನೆಯೊಡನೆ ಅದು ಕ್ರಿಸ್ತನು ಪಾಪ ಪರಿಹಾರ ಯಜ್ಞವಾಗಲಿಲ್ಲ, ಅದು ಪಾಪಗಳಿಗಾಗಿ ಮಾಡಿದ ಬಲಿಯಾಗಿರಲಿಲ್ಲ ಸಾದಿಸುತ್ತದೆ ಹೊರತಾಗಿ ಅದು ಯಾವುದೇ ದೇಶಭಕ್ತನು ತನ್ನ ದೇಶಕ್ಕಾಗಿ ಪ್ರಾಣ ಸಮರ್ಪಣೆ ಮಾಡುತ್ತಾನೆ, ಅದೇ ರೀತಿಯಲ್ಲಿ ಆತನು ತನ್ನ ಜನಾಂಗದವರ ಹೆಚ್ಚಿನ ಸ್ವಾತಂತ್ರ್ಯಕ್ಕಾಗಿ, ಅವರ ಅನುಕೂಲತೆಗಳಿಗಾಗಿ ತನ್ನ ಪ್ರಾಣವನ್ನು ಅರ್ಪಿಸಿದನು ಎಂಬ ಅರ್ಥದಲ್ಲಿ ಅದು ಹೇಳುತ್ತದೆ.

ಈ ಸಮಗ್ರ ವಿಚಾರ ಸರಣಿಯನ್ನು ಸತ್ಯವೇದವು ನಿರ್ಭಂಧವಿಲ್ಲದಂತೆ ವಿರೋಧಿಸುವುದನ್ನು ನಾವು ಕಾಣುತ್ತೇವೆ. ಈ ದೆಸೆಯಿಂದ ಸತ್ಯವೇದದ ಬೋಧನೆಗಳಿಗೂ, ವಿಜ್ಞಾನ ಎಂಬುದಾಗಿ ಸುಳ್ಳಾಗಿ ಕರೆಯಲ್ಪಡುವ ವಿಕಾಸವಾದದ ಬೋಧನೆಗಳಿಗೂ ಯಾವುದೇ ಸಾಮರಸ್ಯ ಸಾಧ್ಯವಾಗದು. ವಿಕಾಸವಾದವನ್ನು ನಂಬುವ ಯಾರಾದರೂ ಆ ಮಟ್ಟಕ್ಕೆ ಸತ್ಯವೇದದ ವಿಚಾರಸರಣಿಯನ್ನು ನಂಬುವುದಿಲ್ಲ. ಹೀಗಿದ್ದರೂ ಬಹಳಷ್ಟು ಕ್ರೈಸ್ತರು ಈ ವಿರೋಧಾಭಾಸವುಳ್ಳ ವಿಕಾಸವಾದದ ವಿಚಾರ ಸರಣಿಯೊಂದಿಗೆ ಸಾಮರಸ್ಯ ಕಂಡುಕೊಳ್ಳುವ ವ್ಯರ್ಥ ಪ್ರಯತ್ನದಲ್ಲಿದ್ದಾರೆ. ವಿಕಾಸವಾದದ ವಿಚಾರ ಸರಣಿಯನ್ನು ಅವರು ಯಾವ ಮಟ್ಟದಲ್ಲಿ ಎತ್ತಿಹಿಡಿಯುವರೋ ಅಷ್ಟರ ಮಟ್ಟಿಗೆ ಅವರು ದೇವರು ತಮಗೆ ಒದಗಿಸಿರುವ ನಂಬಿಕೆಯ ಆಧಾರವನ್ನು ಕಳಕೊಳ್ಳುವವರಾಗಿದ್ದಾರೆ; ಅಷ್ಟರ ಮಟ್ಟಿಗೆ ಅವರು ಮುಂದಿನ ತಪ್ಪುಗಳಿಗೆ ತಮ್ಮನ್ನು ಸಿದ್ಧಮಾಡಿಕೊಳ್ಳುತ್ತಾರೆ. ಇವನ್ನು ವಿರೋಧಿಯು ಖಂಡಿತವಾಗಿಯೂ ಅವರ ಗಮನಕ್ಕೆ ಮುಂದೆ ತರುವವನಾಗಿದ್ದಾನೆ. ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳ ಮೂಲಕ ಬಲವಂತವಾಗಿ ತಪ್ಪುಗಳನ್ನು ಮುಂದೆ ತರುತ್ತಾನೆ. ಸಾಧ್ಯವಾದರೆ, ಇವು ದೇವರು ಆಯ್ದುಕೊಂಡವರನ್ನೇ ಮೋಸಪಡಿಸ ಬಹುದಾಗಿದೆ. ಆದರೆ ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯು ಇದ್ದೇ ಇರುತ್ತದೆ; ಆಯ್ಕೆಗೊಂಡವರೇ ಪಾಪ ನಿವೃತ್ತಿಯ ಸಿದ್ಧಾಂತವನ್ನು ಸತ್ಯವೇದವು ಪ್ರಸ್ತುತ ಪಡಿಸಿರುವ ರೀತಿಯಲ್ಲಿ ಹೊಂದಿರುತ್ತಾರೆ; ಆದುದರಿಂದ ವಿಕಾಸವಾದ ವಿಚಾರ ಸರಣಿಯ ಪ್ರತಿಯೊಂದು ಅಂಶ ಮತ್ತು ಲಕ್ಷಣಗಳಿಂದ ಆಯ್ಕೆಗೊಂಡವರು ರಕ್ಷಿಸಲ್ಪಡುತ್ತಾರೆ. ಈ ಆಯ್ಕೆಗೊಂಡವರು ದೇವರಿಂದ ವಿಶೇಷವಾಗಿ ಪಾಪ ನಿವೃತ್ತಿಯ ಸಿದ್ಧಾಂತದ ಬಗ್ಗೆ ಬೋಧಿಸಲ್ಪಟ್ಟವರಾಗಿದ್ದು ಇದು ಅವರ ಬಹಿರಂಗಗೊಂಡ ಧರ್ಮದ ಬುನಾದಿಯಲ್ಲಿ ಮತ್ತು ಕ್ರೈಸ್ತ ನಂಬಿಕೆಯಲ್ಲಿ ತಳವೂರಿರುತ್ತದೆ.

ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ, ಮಾನಸಿಕವಾಗಿಯೂ, ನೈತಿಕವಾಗಿಯೂ ತನ್ನ ಹೋಲಿಕೆಗೆ ತಕ್ಕಂತೆ ಉಂಟುಮಾಡಿದನೆಂದು ಸತ್ಯವೇದವು ಸಂಶಯವಿಲ್ಲದೆ ಸಾಕ್ಷಿಹೇಳುತ್ತದೆ. ಈ ಲೋಕದ ಜೀವಿಯಾದ ಮನುಷ್ಯನು, ಆತ್ಮೀಕ ಜೀವಿಯಾದ ತನ್ನ ಸೃಷ್ಟಿಕರ್ತನಂತೆ ನೀತಿಯುಳ್ಳ ಹಾಗೂ ಬುದ್ಧಿ ಶಕ್ತಿಯ ಪ್ರತಿರೂಪವಾಗಿದ್ದಾನೆ ಎಂಬುದನ್ನೂ ಹಾಗೂ ಆರಂಭದಲ್ಲಿ ದೇವರೊಂದಿಗಿನ ಅವರ ಸಹಭಾಗಿತ್ವವನ್ನು ಅದು ಪ್ರಕಟಿಸುವುದಲ್ಲದೆ ಸೃಷ್ಟಿಕರ್ತನು ಅವರನ್ನು ತನ್ನ ಕಾರ್ಯಕುಶಲತೆಯೆಂದು ಅಂಗೀಕರಿದ್ದಾನೆಂತಲೂ, ಅವರ ಸೃಷ್ಟಿಕರ್ತನು ಅವರನ್ನು 'ಬಹಳ ಒಳ್ಳೆಯದು', ಬಹಳಷ್ಟು ಅಂಗೀಕಾರಾರ್ಹ, ಬಹು ಆನಂದದಾಯಕವೆಂದು ಒಪ್ಪಿಕೊಂಡಿದ್ದಾನೆಂದೂ ಅದು ಪ್ರಚುರಪಡಿಸುತ್ತದೆ. ಸರ್ವ ಸಂಪೂರ್ಣನಾದ ಆದಾಮನ ಮುಂದೆ ಮರಣ ಮತ್ತು ಜೀವದ ಪ್ರಸ್ತಾಪವನ್ನು ಇಡಲಾಯಿತು. ಆತನು ಅಪರಾಧವೆಸಗಿದಾದ ಅದೊಂದು ಬುದ್ಧಿವಂತಿಕೆಯಿಂದ ಮಾಡಿದ ಇಚ್ಛಾಪೂರ್ವಕವಾದ ಕೃತ್ಯವಾಗಿತ್ತು, ಹೀಗಾಗಿ ಇಲ್ಲಿ 'ಆದಾಮನು ವಂಚನೆಗೆ ಒಳಬೀಳಲಿಲ್ಲ' ಎಂಬುದನ್ನು ಮತ್ತು ಮರಣದಂಡನೆಯ ನೆರವೇರಿಕೆಯ ಆರಂಭವನ್ನು ಇದರಲ್ಲಿ ಪ್ರಕಟಿಸಲಾಗಿದೆ. ಜನಾಂಗಗಳ ಮೇಲೆ ಶತಮಾನಗಳ ಕಾಲ ನೇರವೇರುತ್ತಾ ಬಂದ ಮರಣದ ಪ್ರವೃತ್ತಿಯ ದಾಖಲೆಗಳು ನಮಗೆ ದೇವರ ವಾಕ್ಯದಲ್ಲಿ ದೊರೆಯುತ್ತದೆ. ದೇವರು ನಂಬಿಗಸ್ತನಾಗಿದ್ದ ಅಬ್ರಹಾಮನಿಗೆ ಯಾವ ರೀತಿಯಲ್ಲಿ ತನ್ನ ಉದ್ದೇಶವನ್ನು ಮರಣದಂಡನೆಯ ಶಾಪಕ್ಕೆ ತುತ್ತಾಗಿರುವರೆಂದು ಆತನು ಪ್ರಕಟಿಸಿದ ಆತನ ಸಂತಾನದವರಿಗೆ ಆಶೀರ್ವಾದ ತರುವದು ತಕ್ಷಣವಲ್ಲ, ಮುಂದೆ ನೆರವೇರುವುದನ್ನು ಬಹಿರಂಗಗೊಳಿಸಿದನು ಎಂಬುದನ್ನು ದೇವರ ಪರಿಶುದ್ಧ ಗ್ರಂಥದಲ್ಲಿ ನೋಡಬಹುದು – ಆದಿ. 1:31; 2:17; 3:23; 1, ತಿಮೋ. 2:14; ಆದಿ. 12:3; 18:18; 3:17.

ಪಾಪದ ಶಾಪ ಅಥವಾ ದಂಡವು ಮರಣ ವಾಗಿರುವುದರಿಂದ, ವಾಗ್ದಾನಪಡಿಸಿದ ಆಶೀರ್ವಾದವು ಮರಣದಿಂದ ಜೀವ ಇಲ್ಲವೆ ಸಮೃದ್ಧಿಯಾದ ಜೀವಿತ ಎಂಬ ಅರ್ಥವನ್ನು ಸೂಚಿಸುತ್ತದೆ. ಅಬ್ರಹಾಮನಿಗೆ ನೀಡಲ್ಪಟ್ಟ ವಾಗ್ದಾನವೇನೆಂದರೆ, ಒಂದು ವಿವರಿಸಲಾಗದ ರೀತಿಯಲ್ಲಿ, ಲೋಕವನ್ನು ಆಶೀರ್ವದಿಸುವ ಕಾರ್ಯವನ್ನು ನೆರವೇರಿಸುವಾಗ ಅಬ್ರಹಾಮನ ಪೀಳಿಗೆಯ ಮೂಲಕವೇ ರಕ್ಷಕನು ಬರಬೇಕಾಗುತ್ತದೆ. ಇದೇ ವಾಗ್ದಾನವು ಇನ್ನೂ ಹೆಚ್ಚು ಅಥವಾ ಕಡಿಮೆಯಾದ ಸ್ಪಷ್ಟತೆಯಲ್ಲಿ ಇಸಾಕನಿಗೂ, ಯಾಕೋಬನಿಗೂ, ಇಸ್ರಾಯೇಲ್ಯರ ಮಕ್ಕಳಿಗೂ ಪುನಃ ನೀಡಲಾಯಿತು. ಪ್ರವಾದಿಗಳು ಸಹಾ ಬರಲಿರುವ ಮೆಸ್ಸೀಯನು ಕೊಯ್ಯಲ್ಪಡುವ ಕುರಿಮರಿಯಾಗಿದ್ದಾನೆ, ಪಾಪಗಳ ಪರಿಹಾರಾರ್ಥವಾಗಿ ಕೊಯ್ಯಲ್ಪಡಬೇಕಾಗಿರುವ ದೇವರ ಕುರಿಮರಿ, ನಮ್ಮ ಪಾಪಗಳ ಸಲುವಾಗಿ, "ತನ್ನ ಆತ್ಮವನ್ನೇ ಮರಣದಲ್ಲಿ ಚೆಲ್ಲುವಾತನು" ಎಂದು

ಪ್ರಕಟಿಸಿದ್ದಾರೆ, ಆತನ ಸ್ವಂತಕ್ಕಾಗಿ ಅಲ್ಲ. ಆತನ ಪಾಪದ ನಿಮಿತ್ತ ಸಲ್ಲಿಸಿದ ಈ ಸಮರ್ಪಣೆಯ ಫಲಿತಾಂಶವನ್ನು, ಮತ್ತು ಅದನ್ನು ಅನುಸರಿಸುವ ಮಹಿಮೆ ಮತ್ತು ಆಶೀರ್ವಾದಗಳನ್ನು ಸಹಾ ಅವರು ವರ್ಣಿಸಿದ್ದಾರೆ; ಅಂತಿಮವಾಗಿ ಯಾವ ರೀತಿಯಲ್ಲಿ ಆತನ ರಾಜ್ಯವು ಪ್ರಭಲವಾಗುವುದು ಮತ್ತು ನೀತಿಸೂರ್ಯನಾಗಿ ಯಾವ ರೀತಿಯಲ್ಲಿ ಆತನು ಈ ಲೋಕಕ್ಕೆ ಆಶೀರ್ವಾದ, ಜೀವ ಮತ್ತು ಸಂತೋಷಭರಿತವಾದ ನೂತನ ದಿನವನ್ನು ಬರಮಾಡುತ್ತಾನೆ ಮತ್ತು ಯಾವ ರೀತಿಯಲ್ಲಿ ಇದು ಮೂಲ ಪಾಪದ ಮತ್ತು ಪತನದ ಫಲವಾಗಿ, ಹಾಗೂ ವಂಶಪಾರಂಪರ್ಯವಾಗಿ ಹರಿದುಬಂದ ಕೆಡುಕಿನ ಧೋರಣೆಗಳ ದೆಸೆಯಿಂದ ಈ ಲೋಕದಲ್ಲಿ ಇಂದು ಇರುವ ಅಂಧಕಾರವನ್ನು, ಖಿನ್ನತೆಯನ್ನು, ಗೋಳಾಟದ ರಾತ್ರಿಗಳನ್ನು ನಿವಾರಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ – ಯೆಶಾಯ 53:10–12; 35; 60; 61.

ಈಗ ನಮಗೆ ಕೇಳುವಂತೆ ಮಾನವನು ಮಂಗನ ನೆಲೆಯಿಂದ ಬಂದವನಾಗಿದ್ದಾನೆ, ಪ್ರಸ್ತುತದಲ್ಲಿ ಅಭಿವೃದ್ಧಿಯ ಈ ಮಟ್ಟಕ್ಕೆ ಏರಿದ್ದಾನೆ, ಅಂತ್ಯದಲ್ಲಿ ಈ ವಿಕಸನ ಪ್ರಕ್ರಿಯೆಯು ಮೂಲಕವೇ ಸರ್ವ ಸಂಪೂರ್ಣತೆಯನ್ನು ಪಡಕೊಳ್ಳುತ್ತಾನೆ ಎಂಬ ಹೇಳಿಕೆಗೆ ಬಹು ದೂರವಾಗಿ, ಅಪೋಸ್ತಲನಾದ ಪೇತ್ರನು ಪವಿತ್ರಾತ್ಮನ ಸ್ಫೂರ್ತಿಯ ಮೇರೆಗೆ ವ್ಯತಿರಿಕ್ತವಾದ ರೀತಿಯಲ್ಲಿ, ಕ್ರಿಸ್ತನು ನಮ್ಮ ಪಾಪಗಳ ಸಲುವಾಗಿ ಮರಣ ಹೊಂದಿದನು, ಆತನ ಈ ಸಮರ್ಪಣೆಯಲ್ಲಿ ನೆರವೇರಿದ ವಿಮೋಚನೆಯ ಪರಿಣಾಮವಾಗಿ ಅಂತಿಮವಾಗಿ ಮಾನವ ಕುಲಕ್ಕೆ ಕ್ರಿಸ್ತನ ಎರಡನೆಯ ಬರೋಣದ ಸಂದರ್ಭದಲ್ಲಿ ದೇವರ ಸನ್ನಿಧಿಯಲ್ಲಿ ವಿಶ್ರಾಂತಕಾಲಗಳು ಅಂದರೆ ಎಲ್ಲಾ ಸಂಗತಿಗಳೂ ಪುನರ್‌ವಶಗೊಳ್ಳುವ ಸಮಯ ಒದಗಿ ಬರಲಿದೆ ಮತ್ತು ದೇವರು ಇದನ್ನು ಪೂರ್ವದಲ್ಲಿದ್ದ ತನ್ನ ಎಲ್ಲಾ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ (ಅ.ಕೃ. 3:19–21) ಎಂದು ಹೇಳಿದ್ದಾನೆ. ಅಪೋಸ್ತಲನಾದ ಪೇತ್ರನು ಪುನಃವಶದ ಬಗ್ಗೆ ಬೋಧಿಸುವಾಗ ವಿಕಾಸ ಸಿದ್ಧಾಂತವನ್ನು ಹೇಳುತ್ತಿದ್ದಾನೆಂದು ಯಾರಾದರೂ ತಿಳಿಯುವುದಾದರೆ, ಅಂಥವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ತಮ್ಮ ವಿವೇಚನಾ ಶಕ್ತಿಯ ಪ್ರಯೋಗವನ್ನು ನಿಲ್ಲಿಸಿದ್ದಿರಬೇಕು. ಯಾಕೆಂದರೆ, ಮಾನವನ ಮೂಲ ಸ್ಥಿತಿ ಮಂಗ ಎನ್ನುವುದಾದರೆ ಅಥವಾ ಅದು ನಮ್ಮ ಪ್ರಸ್ತುತ ಸ್ಥಿತಿಗೆ ಕೀಳಾದ ಯಾವುದೇ ಇರಲಿ ಪುನರ್‌ವಶದ ಭವ್ಯವಾದ ಸಮಯವನ್ನು ನಿರೀಕ್ಷಿಸುತ್ತಿರುವ ಅಪೋಸ್ತಲನು ಮಹಾಮೂರ್ಖ ನೆನಿಸಿಕೊಳ್ಳುತ್ತಾನೆ. ಯಾಕೆಂದರೆ, ಪುನಃವಶವೆಂದರೆ, ಈ ಹಿಂದೆ ಇದ್ದ ಸ್ಥಿತಿಯನ್ನು ಪುನಃಪಡಕೊಳ್ಳುವುದು ಎಂದರ್ಥ.

ಇದಕ್ಕೆ ವ್ಯತಿರಿಕ್ತವಾಗಿ ಅಪೋಸ್ತಲನ ಮಾತುಗಳು ಸಾಧ್ಯಂತವಾಗಿ ವಿಕಾಸವಾದದ ಕಲ್ಪನೆಗೆ ಸಾಮರಸ್ಯವಾಗಿರದೆ ತದ್ವಿರುದ್ಧವಾಗಿದೆ ಮತ್ತು ಅವುಗಳು ಪಾಪ ನಿವೃತ್ತಿಯ, ಪುನರ್‌ವಶದ ಮತ್ತು ರಾಜಿ ಸಂಧಾನದ ಸಿದ್ಧಾಂತಗಳಿಗೆ ಬಹಳ ಕಟ್ಟುನಿಟ್ಟಾದ ಸಾಮರಸ್ಯ ವುಳ್ಳವುಗಳಾಗಿವೆ – ಮಾನವ ಜಾತಿಯು ಆದಾಮನ ಅವಿಧೇಯತೆಯ ಕಾರಣವಾದ ಮೂಲ ಪಾಪದ ಸಲುವಾಗಿ ಮತ್ತು ಅದರ ಫಲವಾದ ಮರಣದ ನಿಮಿತ್ತ ಮಾರಲ್ಪಟ್ಟು ಪಾಪದ ದಾಸರಾಗಿ ಬಹಳಷ್ಟು ಸಂಕಟವನ್ನೂ, ಪತನವನ್ನೂ ಅನುಭವಿಸಿದ್ದಾರೆ. ಪೇತ್ರನು ಬೋಧಿಸಿದ ಪುನರ್‌ವಶವೆಂಬ ಶುಭ ಸಮಾಚಾರವು ಬಹಳ ಒಳ್ಳೆಯದಾದ, ಭವ್ಯವಾದ ಮತ್ತು ಬೆಲೆಬಾಳುವ ಯಾವುದೋ ಒಂದು ಕಳೆದುಹೋಗಿದೆ ಮತ್ತು ಅದು ಕರ್ತನಾದ ಯೇಸುವಿನ ಪವಿತ್ರ ರಕ್ತದ ಮೂಲಕ ಪುನಃ ಸಂಪಾದಿಸಲ್ಪಟ್ಟಿದೆ ಮತ್ತು ಕ್ರಿಸ್ತನ ಎರಡನೆಯ ಬರೋಣದಲ್ಲಿ ಇದು ಪುನಃ ಸ್ಥಾಪಿಸಲ್ಪಡುವುದು ಎಂಬ ಅರ್ಥವನ್ನು ನೀಡುತ್ತದೆ. ಅಪೋಸ್ತಲನು ಪ್ರವಾದಿಗಳನ್ನು ಉಲ್ಲೇಖಿಸುತ್ತಾ ಹೇಳಿರುವಂತೆ ಈ ಪುನರ್‌ವಶದ ಸಮಯವನ್ನು ಪವಿತ್ರರಾದವರೆಲ್ಲರೂ ಹೇಳುವವ ರಾಗಿದ್ದಾರೆ ಎಂಬುದು ಮಾನಕುಲದ ಪ್ರಪಂಚದಲ್ಲಿ ಪುನಃವಶವೆಂಬುದು ದೈವಿಕ ಸ್ಫೂರ್ತಿಯಿಂದ ಉಳಿದುಕೊಂಡಿರುವ ಏಕೈಕ ನಿರೀಕ್ಷೆಯಾಗಿದೆ ಎಂಬುದನ್ನು ತಿಳಿಸುತ್ತದೆ.

ಎಲ್ಲಾ ಅಪೋಸ್ತಲರುಗಳು ಈ ಹಿಂದೆ ದೇವರ ಕೃಪೆಯಿಂದ ಮಾನವರು ಬಿದ್ದುಹೋದದ್ದನ್ನು ಮತ್ತು ಕ್ರಿಸ್ತನ ಕ್ರೂಜೆಯು ದೇವರ ನ್ಯಾಯದ ದೃಷ್ಟಿಯಲ್ಲಿ ಪುನಃ ಸಂಧಾನ ಕಾರ್ಯವು ನೆರವೇರಿದೆ ಮತ್ತು ಸಹಸ್ರವರ್ಷದ ಧರ್ಮಯುಗವು ಪ್ರಪಂಚದ ಮಾನವ ಕುಲದವರಿಗೆ ಜ್ಞಾನದ ಅವಕಾಶಗಳನ್ನು ಒದಗಿಸಿಕೊಟ್ಟು ದೇವರೊಂದಿಗೆ ಸಂಧಾನಗೊಳ್ಳಲು ಸಹಾಯಮಾಡುತ್ತದೆ ಎಂಬುದನ್ನು ಒಂದೇ ರೀತಿಯಾಗಿ ಉಲ್ಲೇಖಿಸಿದ್ದಾರೆ. ಇಂದಿನ ಸಮಯವು ಆಯ್ದುಸಭೆಯನ್ನು ಒಗ್ಗೂಡಿಕೊಂಡು ಮೆಸ್ಸೀಯನ ಸಂಗಡ ಆತನ ರಾಜವಂಶಸ್ಥ ಯಾಜಕರಾಗಿ, ಮೀಸಲಾದ ಜನರಾಗಿ ಇರಬೇಕಾದ ಕಾಲವೆಂದು ಅವರು ಹೇಳಿದ್ದಾರೆ. ಕಲ್ವಾರಿಯ ಯಜ್ಞದಲ್ಲಿ ಪೂರ್ಣಗೊಂಡ ಪುನಃಸಂಧಾನದ ಆಶೀರ್ವಾದಗಳು ಲೋಕದವರಿಗೆ ದೊರೆಯುವಂತೆ ಮಾಡುವ ಕಾರ್ಯದಲ್ಲಿ ಆತನೊಂದಿಗೆ ಆತನ "ಮದಲಗಿತ್ತಿ"ಯಾಗಿ, ಆತನ "ದೇಹ"ವಾಗಿ ಸಹಕರಿಸಬೇಕಾಗಿದೆ.

ಈ ದೆಸೆಯಲ್ಲಿ ಅಪೋಸ್ತಲನಾದ ಪೌಲನ ಮಾತುಗಳನ್ನು ಗುರುತಿಸಿರಿ – "ಒಬ್ಬನ ಅವಿಧೇಯತ್ವದಿಂದ ಪಾಪವು – ಪಾಪದ ಫಲವಾಗಿ ಮರಣವು ಲೋಕದೊಳಗೆ ಪ್ರವೇಶಿಸಿತು. ಈ ರೀತಿಯಲ್ಲಿ ಮರಣವು ಎಲ್ಲಾ ಜನರ ಮೇಲೆ ವ್ಯಾಪಿಸಿತು [ವಂಶಪಾರ್ಯಂಪರ್ಯವಾದ

ಪಾಪದ ಮತ್ತು ಪಾಪಮಯವಾದ ಪ್ರವೃತ್ತಿಯ ಕಾರಣ] ಎಲ್ಲರೂ ಪಾಪಿಗಳಾಗಿದ್ದಾರೆ." ಅಪೋಸ್ತಲನಾದ ಪೌಲನು ಸ್ಪಷ್ಟವಾಗಿ ಅಪೋಸ್ತಲನಾದ ಪೇತ್ರ ಮತ್ತು ಇತರ ಪ್ರವಾದಿಗಳಿಗಿಂತಲೂ ಹೆಚ್ಚಾದ ವಿಕಾಸವಾದಿಯಾಗಿರಲಿಲ್ಲ. ಆತನು ಸುವಾರ್ತೆಯ ಸಾರವಾಗಿ ಹೇಳಿರುವ ಮಾತುಗಳನ್ನು ಗುರುತಿಸಿರಿ – "ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವುದು ಮತ್ತೂ ನಿಶ್ಚಯವಲ್ಲವೇ? (ರೋಮಾಪುರ 5:8,9). ಜನಾಂಗವು ದೇವರ ಕೋಪಕ್ಕೆ ತುತ್ತಾಗಿತ್ತು ಎಂಬ ಒಂದು ನಿರ್ಧಿಷ್ಟವಾದ ಪ್ರಕಟನೆ ಇಲ್ಲಿದೆ. ಇದರ ರಕ್ಷಣಾ ಶಕ್ತಿ ಕ್ರಿಸ್ತನ ರಕ್ತಕ್ಕಿದೆ. ಆತನು ನಮಗೋಸ್ಕರ ಪ್ರಾಣತ್ಯಾಗ ಮಾಡಿದ್ದಾನೆ ಮತ್ತು ಈ ಪ್ರಾಣತ್ಯಾಗವು ದೇವರ ಪ್ರೀತಿಯ ಮತ್ತು ಕೃಪೆಯ ಪ್ರದರ್ಶನವಾಗಿದೆ. ಅಪೋಸ್ತಲನು ಪಾಪನಿವೃತ್ತಿಯ ಕಾರ್ಯವನ್ನು ಮತ್ತು ಅದರ ಫಲವಾಗಿ ಉಂಟಾಗುವ ಪುನಃಸಂಧಾನವನ್ನು ತೋರಲು ಮುಂದಾಗುತ್ತಾ – "ಒಂದೇ ಅಪರಾಧದ (ಆದಾಮನ ಅವಿಧೇಯತೆ) ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು (ಮರಣದಂಡನೆ) ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ (ಆ ದಂಡನೆಯನ್ನು ರದ್ದುಪಡಿಸುವಂತೆ) ನೀತಿವಂತರೆಂಬ (ಉಚಿತವಾದ) ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ಒಬ್ಬನ (ಆದಾಮನ) ಅವಿಧೇಯತ್ವದಿಂದ ಎಲ್ಲರೂ (ಆತನಲ್ಲಿದ್ದ ಎಲ್ಲಾ ಮನುಕುಲ) ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ (ಕ್ರಿಸ್ತನ) ವಿಧೇಯತ್ವದಿಂದ ಎಲ್ಲರೂ (ಅಂತಿಮವಾಗಿ ಯಾರು ನೂತನ ಒಡಂಬಡಿಕೆಯ ಸವಲತ್ತುಗಳನ್ನು ಪಡಕೊಂಡರೋ ಅವರೆಲ್ಲರೂ) ನೀತಿವಂತರಾಗುವರು – ರೋಮಾಪುರ 5: 12, 18,19.

ಇದೇ ಅಪೋಸ್ತಲನು ಆತನ ಇನ್ನಿತರ ಅನೇಕ ನೈಪುಣ್ಯತೆಯುಳ್ಳ ಮತ್ತು ತರ್ಕಬದ್ಧವಾದ ಪ್ರವಚನಗಳಲ್ಲಿ ಪಾಪನಿವೃತ್ತಿಯು ದೇವರಿಗೆ ಸಂಬಂಧಿಸಿದಂತೆ ಈ ಹಿಂದೆಯೇ ಅಂದರೆ "ನಾವು ಪಾಪಿಗಳಾಗಿದ್ದಾಗಲೇ ಆತನ ಮಗನ ಮರಣದ ಮೂಲಕ ಆತನೊಂದಿಗೆ ರಾಜಿ ಸಂಧಾನ ಮಾಡಿದಾಗ" ನಡೆದುಹೋದ ವಿಚಾರವಾಗಿದೆ (ರೋಮಾಪುರ 5:10 ನೋಡಿರಿ). ಇದರಲ್ಲಿ ಆತನು ಸ್ಪಷ್ಟವಾಗಿ ಪಾಪಿಗಳ ಮಧ್ಯದಲ್ಲಿ ನೆರವೇರಿದ ಅವರ ಪುನಃಸಂಧಾನದ ಕಾರ್ಯದ ಬಗ್ಗೆ ಹೇಳುವುದಿಲ್ಲ. ಯಾಕೆಂದರೆ, ಆತನು ಅದನ್ನು ಹಿಮ್ಮುಖ ಕ್ರಮದಲ್ಲಿ ಹೇಳುವವನಾಗಿದ್ದಾನೆ. ಅದು ನಮ್ಮಲ್ಲಿ ನೆರವೇರುವುದಲ್ಲ, ಆದರೆ ಅದು ನಾವು ಪಾಪಿಗಳಾಗಿರುವಾಗಲೇ ಕ್ರಿಸ್ತನಿಂದ ನಮಗಾಗಿ ನೆರವೇರಿದೆ. ಆತನು ತನ್ನ ವಿವಿಧ ಪಾಂಡಿತ್ಯಮಯ ಹಾಗೂ ತರ್ಕಬದ್ಧವಾದ ಪ್ರವಚನಗಳಲ್ಲಿ ದೈವಿಕವಾಗಿ ನಿಯುಕ್ತಿಹೊಂದಿದ ಶಿರಸ್ಸಾದ ಕ್ರಿಸ್ತನ ಅಧೀನದಲ್ಲಿರುವ ತನ್ನ ಮಹಿಮೆಯುಳ್ಳ ಸಭೆಯ ಮೂಲಕ ನೆರವೇರುವ ಲೋಕಕ್ಕೆ ಆಶೀರ್ವಾದವನ್ನುಂಟುಮಾಡುವ ಕಾರ್ಯದ ಬಗ್ಗೆ ತಿಳಿಸುವವನಾಗಿದ್ದು ಇದು ಈ ಲೋಕದಲ್ಲಿ ಕ್ರಿಸ್ತನ ಮೂಲಕ ದೇವರ ಕೃಪೆಯ ಜ್ಞಾನವನ್ನು ಉಂಟುಮಾಡುತ್ತದೆಂದು ತೋರಿಸಿಕೊಡುತ್ತದೆ. ಈ ರೀತಿಯಲ್ಲಿ ವಿಮೋಚನೆಗೊಂಡ ಅನೇಕರು ಮತ್ತು ಇಚ್ಛೆಯುಳ್ಳವರೆಲ್ಲರೂ ತಮ್ಮ ಸೃಷ್ಟಿಕರ್ತನೊಂದಿಗೆ ಸಹಸ್ರವರ್ಷಾಳ್ವಿಕೆಯ ರಾಜ್ಯದಲ್ಲಿ ರಾಜಿ ಸಂಧಾನಕ್ಕೆ (At-one-ment) ಅಂದರೆ ಏದೇನ್ ತೋಟದಲ್ಲಿ ಕಳೆದುಕೊಂಡ ದೇವರ ಕೃಪೆಗೆ ಹಿಂತಿರುಗಿ ಬರಬಹುದಾಗಿದೆ.

ಈ ಅಂಶದ ಉದಾಹರಣೆಯು ರೋಮಾಪುರ 8: 17–24ರಲ್ಲಿ ಕಂಡು ಬರುವ ಚರ್ಚೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಅಪೋಸ್ತಲನು ಸಭೆಯ ರಕ್ಷಣೆ ಮತ್ತು ನಂತರದಲ್ಲಿ ಉಂಟಾಗಲಿರುವ ಈ "ಜಗತ್ತೆಲ್ಲಾ ನರಳುತ್ತಾ" ಇರುವ ಲೋಕದ ರಕ್ಷಣೆ ಅಥವಾ ವಿಮೋಚನೆಯ ಬಗ್ಗೆ ಪ್ರತ್ಯೇಕವಾಗಿ ಗುರುತಿಸುತ್ತಾನೆ. ಅವರು ಕ್ರಿಸ್ತನೊಂದಿಗೆ ಜೊತೆ ಭಾವೀ ಸಹಬಾಧ್ಯಸ್ತರು ಎಂಬುದನ್ನು ಆತನು ಸಭೆಯವರ ಗಮನಕ್ಕೆ ತರುತ್ತಾನೆ. ಅವರು ಪ್ರಸ್ತುತ ಸಮಯದಲ್ಲಿ ಕ್ರಿಸ್ತನೊಂದಿಗೆ ಶ್ರಮೆಯಲ್ಲಿ ನಿಷ್ಠಾವಂತರಾಗಿ ತೋರಿಬಂದರೆ, ಅಂತಿಮವಾಗಿ ಆತನ ರಾಜ್ಯದಲ್ಲಿ ಆತನ ಮಹಿಮೆಯಲ್ಲಿ ಪಾಲುದಾರರಾಗುವರು. ಪ್ರಸ್ತುತ ಕಾಲದ ಈ ಶ್ರಮೆಯು ನಮ್ಮಲ್ಲಿ ಆಗಾಗ ಪ್ರಕಟಗೊಳ್ಳುವ ಮಹಿಮೆಯೊಂದಿಗೆ ಹೋಲಿಸಲು ಅನರ್ಹವಾಗಿದೆ ಎಂಬ ಭರವಸೆ ನೀಡುವವನಾಗಿದ್ದಾನೆ. ನಂತರದಲ್ಲಿ ಆತನು ಮುಂದುವರೆದು ಈ ಮಹಿಮೆಯು ಸಭೆಯಲ್ಲಿ ಅದರ ಎಲ್ಲಾ ಶ್ರಮೆಗಳು ಮುಕ್ತಾಯವಾದ ಮೇಲೆ ಪ್ರಕಟಗೊಳ್ಳುವುದು ಎಂದು ತಿಳಿಸುತ್ತಾನೆ. ಇದು ನರಳುವ ಜಗತ್ತಿನ ಎಲ್ಲಾ ನಿರೀಕ್ಷೆಗಳಿಗೆ ತಳಹದಿಯಾಗಿದೆ. ಅವರ ಹಂಬಲಗಳೂ, ನಿರೀಕ್ಷೆಗಳೂ ದೇವರ ಮಕ್ಕಳು ಬಹಿರಂಗಗೊಂಡು ಸ್ಪಷ್ಟವಾಗಿ ಪ್ರಕಟನೆಗೊಳ್ಳುವ ಫಲಕ್ಕಾಗಿ ಅಗತ್ಯವಾಗಿ ಕಾಯುತ್ತದೆ.

ಈಗ ದೇವರ ಪುತ್ರರ ಮಹಿಮೆಯು ಪ್ರತ್ಯಕ್ಷವಾಗಿಲ್ಲ; ಲೋಕವು ಅವರನ್ನು ಅರಿತಿಲ್ಲ; ಅವರ ಒಡೆಯನನ್ನೂ ಅರಿತಿರಲಿಲ್ಲ: ಈ ಲೋಕವು ನಿಜವಾಗಿಯೂ ಅಸ್ಪಷ್ಟವಾದ ನಿರೀಕ್ಷೆಯೊಡನೆ ಆಶೀರ್ವಾದಕರ ಸುವರ್ಣ ಯುಗವನ್ನು ನಿರೀಕ್ಷಿಸುತ್ತದೆಯಾದರೂ ಅವರ ಮನಃಪೂರ್ವಕ ನಿರೀಕ್ಷಣೆಗಳಿಗಾಗಿ ಸಭೆಯು, ದೇವರ ಪುತ್ರರು ಮಹಿಮೆಹೊಂದಿಕೊಳ್ಳುವವರೆಗೆ ಹಾಗೂ ಅವರುಗಳು ದೇವರು ನೇಮಿಸಿದ ರಾಜರುಗಳೂ, ಯಾಜಕರುಗಳೂ

ಆಗುವ ತನಕ, ಅವರು ಮಿಲಿಯಾಂತರ ಯುಗದಲ್ಲಿ ರಾಜ್ಯಭಾರ ಮಾಡುವವರೆಗೆ ಕಾಯಬೇಕಾಗುತ್ತದೆ. ಯಾಕೆಂದರೆ, ಈ ಲೋಕದ ಎಲ್ಲಾ ಕುಟುಂಬಗಳ ಆಶೀರ್ವಾದವು ದೇವರ ಕೃಪೆಯ ಭಾಗ್ಯದ ಮೇರೆಗೆ ಆತನು ಅಬ್ರಹಾಮನಿಗೆ ಮಾಡಿದ "ನಿನ್ನ ಮೂಲಕ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವುದು" (ಆದಿ. 3:8, 16, 29) ಎಂಬ ವಾಗ್ದಾನದಲ್ಲಿ ಪ್ರಕಟವಾಗಿದೆ.

ಅಪೋಸ್ತಲನು ಮುಂದುವರೆದು, ಮಾನವ ಜಾತಿಯು ಸಾಮಾನ್ಯವಾಗಿ "ಈ ಲೋಕದಲ್ಲಿರುವ ಬುದ್ಧಿವಂತ ಸೃಷ್ಟಿ"ಯಾಗಿದ್ದು ಆತನು ತಂದೆಯಾದ ಅದಾಮನ ಅಪರಾಧದ ನಿಮಿತ್ತ ದೇವರ ವಿಧಿಗನುಸಾರವಾಗಿ ವಂಶಪಾರಂಪರ್ಯವಾದ ವ್ಯರ್ಥತ್ವಕ್ಕೆ ತುತ್ತಾಗಿದ್ದಾನೆಂದು ಹೇಳುತ್ತಾನೆ. ಹೀಗಿದ್ದರೂ ಆತನಿಗೆ ನಿರೀಕ್ಷೆ ಇಲ್ಲದೆ ಇಲ್ಲ. ಯಾಕೆಂದರೆ, ದೈವಿಕ ವ್ಯವಸ್ಥೆಗನುಸಾರವಾಗಿಯೂ ಸಹಾ ಪಾಪ ಪರಿಹಾರದ ಯಜ್ಞವೊಂದನ್ನು ಅರ್ಪಿಸಲಾಗಿದೆ ಮತ್ತು ಅಂತ್ಯದಲ್ಲಿ ಮಾನವ ಜಾತಿಯವರು ಪಾಪದ ದಾಸತ್ವದಿಂದ, ಅದರ ಸಂಬಳವಾದ ಮರಣದಿಂದ ಮುಕ್ತಿಗೊಳ್ಳುವ ಮತ್ತು ರೋಗ, ನೋವು, ಸಂಕಟ ಮತ್ತು ಶೋಕಗಳಿಂದ ಭವ್ಯವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಮುನ್ನೇರ್ಪಾಡೊಂದನ್ನು ಮಾಡಲಾಗಿದೆ. ಇದು ದೇವರ ಪುತ್ರರೆಲ್ಲರಿಗೂ ದೊರೆಯುವ ಬಿಡುಗಡೆಯಾಗಿದೆ. 'ದೇವರ ಪುತ್ರರು' ಎಂಬ ಇಂಥಾಃ ಮುಕ್ತವಾದ ನೆಲೆಯಿಂದ ಮಾನವನು ಅವಿಧೇಯತೆಯ ಕಾರಣ ಬಿದ್ದು ಹೋಗಿದ್ದನು. ಕಲ್ವಾರಿಯಲ್ಲಿ ನಡೆದ ಆ ಮಹಾ ತ್ಯಾಗದ ಫಲವಾಗಿ, ಪಾಪ ನಿವೃತ್ತಿಯ ಕಾರ್ಯವು ಯಶಸ್ವಿಯಾಗಿ ನೇರವೇರಿರುವುದರಿಂದ ಈಗ ಪುನಃ ದೇವರ ಮಕ್ಕಳೆಂಬ ಆ ನೆಲೆಗೆ ಹಿಂತಿರುಗುವ ಸೌಭಾಗ್ಯವು ಅವರಿಗೆ ದೊರೆಯಲಿದೆ. ಅವರು ವಿಮೋಚಕನ ಮೂಲಕ ದೇವರೊಂದಿಗೆ ಸಂಧಾನಮಾಡಿಕೊಂಡಿದ್ದು ಮಹಾ ಪ್ರವಾದಿಯಾದ ಮೋಶೆಯ ಪ್ರತಿಸಂಕೇತರಾಗಿ ದೈವಿಕ ನಿಯಮಗಳಿಗೆ ಹಿಂತಿರುಗಿದ್ದಾರೆ (ಅ.ಕೃ. 3:22,23 ನೋಡಿರಿ). ಅಪೋಸ್ತಲನು ಮುಂದುವರೆದು, ಈಗಾಗಲೇ ಪಾಪ ನಿವೃತ್ತಿಯನ್ನು ಹೊಂದಿಕೊಂಡಿದ್ದು ದೇವರ ಸಾಮರಸ್ಯಕ್ಕೆ ಒಳಗಾಗಿರುವ ಸಭೆಯು ಪ್ರಥಮ ಆತ್ಮೀಕ ಫಲಗಳನ್ನು ಹೊಂದಿಕೊಳ್ಳುವಂತೆ ಮಾಡಲಾಗಿದೆ. ಪರಂತು ಪರಿಸರ ಮತ್ತು ನರಳಾಟದ ಕಾರಣ ದೇವರ ಕೃಪೆಯನ್ನು, ಕ್ರಿಸ್ತನ ಪ್ರಥಮ ಆಗಮನದಲ್ಲಿ ಆತನ ದೇಹದ ಬಿಡುಗಡೆಯುನ್ನು ಪೂರ್ಣ ಹೊಂದಿದವರಾಗಿ, ಪೂರ್ಣಗೊಂಡ ಪಾಪನಿವೃತ್ತಿಯ ಕಾರ್ಯದಲ್ಲಿ ಅದು ತನ್ನ ಪಾಲಿಗಾಗಿ ಕಾಯುತ್ತಿದೆ (ರೋಮಾ. 8:23–25 ನೋಡಿರಿ) ಎಂದು ಹೇಳುವವನಾಗಿದ್ದಾನೆ.

ಪಾಪ ನಿವೃತ್ತಿಯ ಎರಡು ಲಕ್ಷಣಗಳು ಅಂದರೆ (1) ತಪ್ಪನ್ನು ಸರಿಪಡಿಸುವುದು ಮತ್ತು (2) ಬೇರೆಯಾದವರನ್ನು ಹೊಂದಾಣಿಕೆ ಪಡಿಸುವುದು, ಇವುಗಳೆರಡೂ ದೈವಿಕ ಪ್ರಸ್ತಾಪವಾದ ನೂತನ ಒಡಂಬಡಿಕೆಯಲ್ಲಿ ತೋರಿಬರುತ್ತವೆ ಮತ್ತು ಇದರ ಮಧ್ಯಸ್ತಗಾರನು ನಮ್ಮ ಕರ್ತನಾದ ಯೇಸು ಕ್ರಿಸ್ತನೇ ಆಗಿದ್ದಾನೆ. ಆದಿ ತಂದೆಯಾದ ಆದಾಮನು ಪರಿಪೂರ್ಣನಾಗಿದ್ದಾಗ ಅಂದರೆ ಆತನು ತನ್ನ ಸೃಷ್ಟಿಕರ್ತನೊಂದಿಗೆ ಸಂಪೂರ್ಣವಾಗಿ ಸಾಮರಸ್ಯ ದಿಂದಿದ್ದಾಗ, ಆತನ ಎಲ್ಲಾ ಅಪ್ಪಣೆಗಳಿಗೆ ವಿಧೇಯನಾಗಿದ್ದಾಗ, ಅವರ ನಡುವೆ ಒಡಂಬಡಿಕೆ ಯೊಂದು ಸೂಚಿತವಾಗುತ್ತದೆಯಾದರೂ ಅದು ವಿಧಿಯುಕ್ತವಾಗಿ ವ್ಯಕ್ತವಾಗಿರುವುದಿಲ್ಲ. ತಂದೆಯಾದ ಆದಾಮನಿಗೆ ಸರ್ವ ಸಂಪೂರ್ಣವಾದ ಜೀವಿತವನ್ನು ನೀಡಲಾಗಿದೆ ಎಂಬ ಸತ್ಯದೊಂದಿಗೆ, ಆತನಿಗೆ ಎಲ್ಲಾ ಪಶುಪಕ್ಷಿಗಳ ಮೇಲೆ ಪೂರ್ಣಾಧಿಕಾರವನ್ನು ನೀಡಲಾಗಿತ್ತು, ಹಾಗೂ ಇಡೀ ಭೂಮಿಯೇ ಆತನ ರಾಜ್ಯದ ಸರಹದ್ದಾಗಿತ್ತು. ಇದರೊಂದಿಗೆ, ಆತನು ರಾಜಾಧಿರಾಜನಾದ ಯೆಹೋವನಿಗೆ ತನ್ನ ನಿಷ್ಠೆಯನ್ನು ಬದಲಾಯಿಸಿದ್ದೇ ಆದರೆ, ಆತನಿಗೆ ಅವಿಧೇಯನಾಗುವುದಾದರೆ ಆತನು ಪ್ರಾಣನಷ್ಟ ಪಡುವನು, ಮತ್ತು ಆತನಿಗೆ ದಯಪಾಲಿಸಿರುವ ಎಲ್ಲಾ ಹಕ್ಕುಗಳೂ, ಆಶೀರ್ವಾದಗಳನ್ನು ಕಳೆದುಕೊಳ್ಳುವರು ಎಂದು ನಿರ್ಧಾರವಾಗಿತ್ತು – ಇದರ ಅರ್ಥ, ಮಾನವರ ಜೀವವು ನಿರಂತರವಾಗಿರುತ್ತಿತ್ತು, ಆದರೆ ಅವರು ದೇವರೊಂದಿಗೆ ಅವಿಧೇಯತೆ ತೋರಿದಲ್ಲಿ ತಮ್ಮ ಮೇಲೆ ಮರಣವನ್ನು ಬರಮಾಡಿಕೊಳ್ಳುವರು ಎಂಬುದಾಗಿ ದೇವರು ತನ್ನ ಸೃಷ್ಟಿಗಳಾದ ಆದಿ ತಂದೆತಾಯಿಗಳೊಡನೆ ಮಾಡಿಕೊಂಡ ವ್ಯವಸ್ಥೆ ಇಲ್ಲವೇ ಒಡಂಬಡಿಕೆಯಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ ಎಂಬುದಾಗಿ ನಾವು ಹೇಳುತ್ತೇವೆ.

ದೇವರು ಆದಾಮನ ಸಂತಾನವನ್ನು ಪುನರುದ್ಧಾರ ಮಾಡುವಂತೆ ಒದಗಿಸಿ ಕೊಟ್ಟ ನೂತನ ಒಡಂಬಡಿಕೆಯ ಹೊರತಾಗಿ, ಅದಾಮನ ಅವಿಧೇಯತೆ, ಮತ್ತು ಅದಕ್ಕಾಗಿ ಉಂಟಾದ ಮರಣ ದಂಡನೆ ಆತನನ್ನು ಸಂಪೂರ್ಣವಾಗಿ ನಿಸ್ಸಹಾಯಕನನ್ನಾಗಿ ಮಾಡಿದ್ದವು. ಅಪೋಸ್ತಲನು ಗಮನಸೆಳೆಯುವಂತೆ ಈ ನೂತನ ಒಡಂಬಡಿಕೆಯಲ್ಲಿ ಒಬ್ಬ ಮಧ್ಯಸ್ಥಗಾರನಿದ್ದಾನೆ. ಒಂದು ಕಡೆಯಲ್ಲಿ ದೇವರು ಮಧ್ಯಸ್ಥಗಾರನೊಂದಿಗೆ ವ್ಯವಹರಿಸುತ್ತಾನೆ, ಪಾಪಿಯ ಸಂಗಡವಲ್ಲ; ಮತ್ತೊಂದೆಡೆ ಪಾಪಿಯು ಮಧ್ಯಸ್ಥಗಾರನೊಂದಿಗೆ ವ್ಯವಹರಿಸುತ್ತಾನೆಯೇ ಹೊರತು ದೇವರೊಂದಿಗೆ ಅಲ್ಲ. ಆದರೆ ನಮ್ಮ ಕರ್ತನಾದ ಯೇಸುವು ಮಧ್ಯಸ್ಥಗಾರನಾಗುವ ಮೊದಲು ಮನುಕುಲಕ್ಕೆ ಒಂದು ಕಾರ್ಯವನ್ನು ಮಾಡಬೇಕಾಗಿದೆ. ಈ ಕಾರ್ಯವನ್ನು

ಸತ್ಯವೇದವು ಆತನ ಪರಿಶುದ್ಧ ರಕ್ತದ ಮೂಲಕ ಮುದ್ರಿಸುವುದು ಎಂಬಂತೆ "ಇದು ಹೊಸ ಒಡಂಬಡಿಕೆಯ ರಕ್ತ"ಎಂದು ವರ್ಣಿಸುತ್ತದೆ (ಮತ್ತಾಯ 26:28, ಮಾರ್ಕ. 14:24, ಇಬ್ರಿಯ 7:22 ಮತ್ತು 9:15–20 ಇವುಗಳನ್ನು ನೋಡಿರಿ). ಇದು ಹೇಳುವುದೇನೆಂದರೆ, ನ್ಯಾಯದ ಪ್ರಕಾರವಾಗಿ ದೇವರು ಪಾಪಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಸ್ವೀಕರಿಸುವುದಿಲ್ಲ ಅಥವಾ ಆತನೊಂದಿಗೆ ವ್ಯವಹರಿಸುವುದಿಲ್ಲ. ಹಾಗೆ ಮಾಡಿದರೆ ಆತನ ಮರಣದಂಡನೆಯಿಂದ ಬಿಡುಗಡೆಯಾಗುತ್ತಾನೆ ಮತ್ತು ಆತನು ದೇವರೊಂದಿಗೆ ಪುನಃಸಂಧಾನವನ್ನು ಅವುಗಳ ಆಶೀರ್ವಾದಗಳೊಂದಿಗೆ ಹೊಂದಿಕೊಳ್ಳುತ್ತಾನೆ ಮತ್ತು ಆತನು ನಿತ್ಯಜೀವವನ್ನು ಬಹುಮಾನವಾಗಿ ಪಡಕೊಳ್ಳುತ್ತಾನೆ. ಆದ್ದರಿಂದ, ಮೊದಲನೆಯದಾಗಿ ದೈವಿಕ ನ್ಯಾಯವನ್ನು ನೆನಪಿಸಿಕೊಂಡು ಅದನ್ನು ತೃಪ್ತಿಪಡಿಸಿದ ನಂತರದಲ್ಲಿ ಇದು ಸಾಧ್ಯ. ಹೀಗಾಗಿ ನಮ್ಮ ಕರ್ತನಾದ ಯೇಸುವು ತನ್ನ ಮರಣದ ಮೂಲಕ ನಮ್ಮ ದಂಡವನ್ನು ತೆರುವವನಾಗಿದ್ದು ಆ ಮೂಲಕವಾಗಿ ಮಾನವರಿಗೂ ದೇವರಿಗೂ ಉಂಟಾಗುವ ನೂತನ ಒಡಂಬಡಿಕೆಗೆ ತನ್ನ ಪರಿಶುದ್ಧ ರಕ್ತದ ಮುದ್ರೆಯನ್ನು ಒತ್ತುವವನಾಗಿದ್ದಾನೆ. ಇದರ ಶರತ್ತುಗಳಿಗೆ ಅನುಸಾರವಾಗಿ ಮಧ್ಯಸ್ಥಗಾರನ ಮೂಲಕ ದೇವರ ಬಳಿಗೆ ಬರುವವರೆಲ್ಲರೂ ಅಂಗೀಕಾರಾರ್ಹರಾಗಿರುವರು.

ದೇವರೊಂದಿಗೆ ಮಾಡಿಕೊಳ್ಳುವ ರಾಜಿ ಸಂಧಾನವು ಆತನೊಂದಿಗಿನ at-one-ment ಆಗಿದ್ದು ಇದು ಮೊದಲಿಗೆ ಪರಿಶುದ್ಧ ರಕ್ತದ ಮೂಲಕ ವಿಮೋಚನೆ ಪಡಕೊಳ್ಳದ ಹೊರತು ಸಾಧ್ಯವಿಲ್ಲ. ಪಾಪ ನಿವೃತ್ತಿ (at-one-ment) ಬಯಸುವವರು ನೂತನ ಒಡಂಬಡಿಕೆಯ ಮಧ್ಯಸ್ತಗಾರನ ಮೂಲಕವಷ್ಟೇ ದೇವರನ್ನು ಸಮೀಪಿಸಬಹುದಾಗಿದೆ – ಯಾಕೆಂದರೆ ಆತನೇ "ಮಾರ್ಗವೂ, ಸತ್ಯವೂ ಜೀವವೂ ಆಗಿದ್ದಾನೆ" (ಯೋಹಾನ 14:6). ಈ ಕಾರಣದಿಂದ ದೇವರ ಮಹಾ ಕೃಪೆಗೆ ಪಾತ್ರವಾದ ಮಾನವ ಜಾತಿಯವರು, ಕ್ರಿಸ್ತನ ಅರ್ಪಣೆಯ ಪೂರ್ವದಲ್ಲಿ ಕೇವಲ ದೇವರ "ಸೇವಕರೂ" ಇಲ್ಲವೇ "ಸ್ನೇಹಿತರೂ" ಆಗಿದ್ದರು, ಅವರಿಗೆ ಅದಕ್ಕಿಂತ ಹೆಚ್ಚಾದ ಮಕ್ಕಳ ಸ್ಥಾನ ನೀಡಲಾಗಿರಲಿಲ್ಲ ಮತ್ತು ಯಾರನ್ನೂ ಇದಕ್ಕೆ ಪರಿಗಣಿಸಲಾಗಿರಲಿಲ್ಲ – "ಯಾರಾರು ಆತನನ್ನು (ಯೇಸುವನ್ನು) ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು (ಯೋಹಾನ 1:12, ಮಾರ್ಕ 11:11 ಸಹಾ ನೋಡಿರಿ). ಈ ಕಾರಣದಿಂದ ಯಾರು ಪಾಪ ಪ್ರಾಯಶ್ಚಿತ್ತ ಯಜ್ಞವನ್ನು, ಮತ್ತು ಪಾಪನಿವೃತ್ತಿಯ ನ್ಯಾಯವನ್ನು ತಣಿಸುವ ಲಕ್ಷಣವನ್ನು ನಿರ್ಲಕ್ಷಿಸುತ್ತಾರೋ ಅಂಥವರು ಪ್ರಾಮುಖ್ಯವಾದ ಮತ್ತು ಅನಿವಾರ್ಯವಾದ ಪ್ರಾಥಮಿಕ ಮತ್ತು ಮೂಲಭೂತವಾದ ಭಾಗಗಳನ್ನೇ ಕಡೆಗೆಣಿಸುವವರಾಗಿದ್ದಾರೆ. ಆದರೆ, ಇತರರು ಇದಕ್ಕಿಂತ ಕಡಿಮೆ ತಪ್ಪು ಮಾಡಿಲ್ಲವೆಂದಲ್ಲ. ಕ್ರಿಸ್ತನ ಯಜ್ಞವನ್ನು ನೂತನ ಒಡಂಬಡಿಕೆಯನ್ನು ಮುದ್ರಿಸುವ ಪಾಪನಿವೃತ್ತಿಯ ಯಜ್ಞವನ್ನಾಗಿ ಪರಿಗಣಿಸುತ್ತಾರೆ. ಇದೊಂದು ಕಡೆ ಮಾನವರನ್ನು ನೂತನ ಒಡಂಬಡಿಕೆಯ ಮೂಲಕ ದೇವರ ಸಾಮರಸ್ಯಕ್ಕೆ ತರುವ ಪುನರ್‌ಸಂಧಾನವೆಂಬುದನ್ನು ಇತರರು ಕಡೆಗಣಿಸುವವರಾಗಿದ್ದಾರೆ.

ಮಾನವ ಜೀವಿಗೆ ಸಂಬಂಧಿಸಿದಂತೆ ಪಾಪಪರಿಹಾರದ ಈ ಕಾರ್ಯವು ನಂಬಿಕೆಯ ಮೂಲಕ ತಕ್ಷಣದಲ್ಲಿ ನೆರವೇರುವುದಲ್ಲ. ಅದು ನಂಬಿಕೆಯ ಮೂಲಕ ತಕ್ಷಣದಲ್ಲಿ ಪ್ರಾರಂಭವಾಗಬಹುದು, ಮತ್ತು ಪಾಪ ನಿವೃತ್ತಿ (at-one-ment) ಎಂಬುದು ಪಾಪಿ ಮತ್ತು ಸರ್ವಶಕ್ತನ ನಡುವೆ ನಂಬಿಕೆಯ ಮೂಲಕ ನೆರವೇರುವುದೆಂದು ಎಣಿಸಬಹುದು; ಆದರೆ ದೇವರು ಉದ್ದೇಶಿಸಿರುವ ಪಾಪನಿವೃತ್ತಿಯ ಉದ್ದೇಶವು ಇದಕ್ಕಿಂತಲೂ ಭವ್ಯವೂ, ಉನ್ನತವೂ ಆಗಿದೆ. ಆತನ ವ್ಯವಸ್ಥೆ ಏನೆಂದರೆ, ಆತನೊಂದಿಗೆ ಪಾಪ ನಿವೃತ್ತಿಗೆ (ಆತನ ನೀತಿವಂತ ಶಾಸನಕ್ಕೆ) ಹಿಂತಿರುಗಬಯಸುವ ಮಾನವ ಕುಲದವರು ಮಧ್ಯಸ್ಥಗಾರನ ಮೂಲಕ ಅಂಗೀಕಾರ ಹೊಂದಿಕೊಳ್ಳುವರೆಂದು ಎಣಿಸಲಾಗುವುದು, ಆದರೆ ಅವರುಗಳು ಇನ್ನೂ ಅಸಮರ್ಪಕರಾಗಿರುವುದರಿಂದ ಸಂಪೂರ್ಣವಾಗಿ, ತಂದೆ ದೇವರಿಂದ ಸಮಗ್ರವಾಗಿ ಅಂಗೀಕಾರ ಹೊಂದಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ, ಮಧ್ಯಸ್ಥನ ಕೆಲಸವೇನೆಂದರೆ (ಶಿರಸ್ಸು ಮತ್ತು ದೇಹ) ಮನುಕುಲಕ್ಕೆ ದೇವರು ಪ್ರಾಯಶ್ಚಿತ್ತ ಯಜ್ಞವನ್ನು ಒದಗಿಸಿದನು ಎಂದು ಸಾರುವದಾಗಿದೆ. ಹಾಗಾಗಿ ದೇವರು ನ್ಯಾಯವಂತನಾಗಿಯೂ ಮತ್ತು ಪಾಪಿಗಳನ್ನು ಆತನೊಂದಿಗೆ ಸಾಮರಸ್ಯ ಹೊಂದಿಕೊಳ್ಳುವಂತೆ ಸ್ವೀಕರಿಸಬಹುದಾಗಿದೆ. ಆತನು ಈಗ ಅವರಿಗೆ ತನ್ನ ಮಕ್ಕಳಾಗುವ ಆಶೀರ್ವಾದವನ್ನೂ, ಆ ಮೂಲಕವಾದ ನಿತ್ಯಜೀವವನ್ನೂ, ಭ್ರಷ್ಟತೆಯಿಂದ ಬಿಡುಗಡೆಯನ್ನೂ ದಯಪಾಲಿಸುವವನಾಗಿದ್ದಾನೆ. ಇದರೊಂದಿಗೆ ಈ ರಕ್ಷಣಾ ಕೊಡುಗೆಯು ಮಾನವ ಜಾತಿಗೆ ಬಲು ದೊಡ್ಡ ವರವಾಗಿದೆ ಮತ್ತು ಇದನ್ನು ಯಥಾರ್ಥವಾಗಿ ಸ್ವೀಕರಿಸತಕ್ಕದ್ದು ಹಾಗೂ ಇದರ ಶರತ್ತೆಂದರೆ ಯಥಾರ್ಥವಾದ ಸೇವೆ ಎಂಬುದನ್ನು ಸ್ಪಷ್ಟಪಡಿಸುವುದು ಆತನ ಕಾರ್ಯವಾಗಿದೆ. ಇದರೊಂದಿಗೆ, ತಂದೆಯ ಪ್ರತಿನಿಧಿಯಾಗಿರುವ ಮಧ್ಯಸ್ಥಗಾರನ ಕೆಲಸವೆಂದರೆ ಮಾನಸಿಕವಾಗಿ, ನೈತಿಕವಾಗಿ ಮತ್ತು ಭೌತಿಕವಾಗಿ ಮಾನವ ಜಾತಿಯನ್ನು ಪುನಃಸ್ಥಾಪಿಸುವುದು – ಈ ರೀತಿಯಲ್ಲಿ ಅನೇಕರು ಆತನ ಸೇವಾವೃತ್ತಿಯನ್ನು ಹೊಂದಿಕೊಳ್ಳುವರು ಮತ್ತು ಆತನಿಗೆ ವಿಧೇಯರಾಗುವರು.

ಹೀಗೆ ಮಧ್ಯಸ್ಥಗಾರನ ಕಾರ್ಯವು ಆತನು ಯಾರನ್ನು ಪುನಃ ಸಮರ್ಪಕಗೊಳಿಸುತ್ತಾನೋ ಅವರಿಗೆ ದೇವರೊಂದಿಗೆ ಸಂಭವನೀಯವಾಗಿ ನಿಜವಾದ ಪಾಪ ನಿವೃತ್ತಿಯನ್ನು (actual at-one-ment) ಉಂಟು ಮಾಡುವುದಾಗಿದೆ.

ಮಧ್ಯಸ್ಥಗಾರನ ಈ ಮಹಾ ಕಾರ್ಯವು ಅದರ ಸಮಗ್ರವಾದ ಮಿಲಿಯಾಂತರ ಯುಗಕ್ಕೆ ವಿನಿಯೋಗಿಸುವುದಾಗಿದೆ. ಈ ಕಾರಣದಿಂದಲೇ ಮೆಸ್ಸೀಯನ ರಾಜ್ಯವು ಈ ಲೋಕದಲ್ಲಿ ತನ್ನೆಲ್ಲಾ ಶಕ್ತಿ ಮತ್ತು ಅಧಿಕಾರ ದೊಂದಿಗೆ ಸ್ಥಾಪಿತವಾಗಲಿದೆ ಮತ್ತು ಈ ಕಾರಣದಿಂದ ಆತನು ಪುನಃ ರಾಜ್ಯಭಾರ ಮಾಡಬೇಕಾಗಿದೆ ಮತ್ತು ದೇವರ ಪ್ರೀತಿ ಮತ್ತು ಕೃಪಾಜ್ಞಾನವನ್ನುಂಟುಮಾಡುವುದನ್ನು ಅಡ್ಡಿಪಡಿಸುವ ಕೆಡುಕನ ಎಲ್ಲಾ ಪ್ರಭಾವವನ್ನು ಕೆಳಕ್ಕೆ ಹಾಕಬೇಕಾಗಿದೆ. ಈ ಅವಕಾಶವು ನೂತನ ಒಡಂಬಡಿಕೆಯ ಅಡಿಯಲ್ಲಿ ದೇವರ ಬಳಿಗೆ ಹಿಂತಿರುಗಲು ಇಚ್ಛೆಪಡುವವರಿಗಾಗಿ ಒದಗಿಸಲಾಗಿದೆ. ಆದರೆ ಮಹಾ ಮಧ್ಯಸ್ಥಗಾರನು ಈ ರೀತಿಯಲ್ಲಿ ನೂತನ ಒಡಂಬಡಿಕೆಯ ಶರತ್ತುಗಳಿಗನುಸಾರವಾಗಿ ದೇವರ ಸಾಂಗತ್ಯವನ್ನು ಬಯಸುವವರನ್ನು ಅಂಗೀಕರಿಸಿ, ಆಶೀರ್ವದಿಸಿ ಪುನಃಸ್ಥಾಪಿಸುತ್ತಾನೆ. ಮಿಲಿಯಾಂತರ ಯುಗದ ರಾಜ್ಯದ ಈ ಪುನಃಸಂಧಾನದ ಮಾಹಾ ಕೊಡುಗೆಯ ಅವಕಾಶಗಳನ್ನು ತಿರಸ್ಕರಿಸುವವರನ್ನು ಆತನು ನಾಶಗೊಳಿಸುತ್ತಾನೆ – ಅ.ಕೃ. 3:23, ಮತ್ತಾಯ 25:41, 46; ಪ್ರಕಟನೆ 20:09, 14, 15; ಜ್ಞಾನೋಕ್ತಿ 2:21,22.

ಮಿಲಿಯಾಂತರ ಯುಗವು ಅದು ವಿನ್ಯಾಸಗೊಂಡು ಸ್ಥಾಪಿಸಲ್ಪಟ್ಟ ಎಲ್ಲಾ ಉದ್ದೇಶಗಳೂ ಯಶಸ್ವಿಯಾಗಿ ನೆರವೇರಿದ ಮೇಲೆ ಮುಕ್ತಾಯಗೊಳ್ಳುವುದು. ಆಗ ಕ್ರಿಸ್ತನ ಮಧ್ಯಸ್ಥಗಾರಿಕೆಯ ಕಾರ್ಯಭಾರಿಯು ಸ್ಥಗಿತಗೊಳ್ಳುವುದು. ಯಾಕೆಂದರೆ ಇನ್ನು ಮುಂದೆ ಯಾವುದೇ ದಂಗೆಯಾಗಲೀ, ಪಾಪಿಗಳಾಗಲೀ ಇರುವುದಿಲ್ಲ. ದೇವರೊಂದಿಗೆ ಸಾಮರಸ್ಯಗೊಳ್ಳುವ ಇಚ್ಛೆಯುಳ್ಳವರೆಲ್ಲರೂ ಆಗ ಅದನ್ನು ಸರ್ವಸಂಪೂರ್ಣವಾಗಿ ಹೊಂದಿಕೊಂಡಿರುವರು. ಎಲ್ಲಾ ಇಚ್ಛಾಪೂರ್ವಕರಾದ ಪಾಪಿಗಳು ಆ ಸಮಯಕ್ಕೆ ಜೀವದಿಂದ ಕಡಿದು ಹಾಕಲ್ಪಟ್ಟಿರುವರು. ಆಗ ಭೂಪರಲೋಕದಲ್ಲಿರುವವುಗಳೆಲ್ಲರೂ ಕರ್ತನ ನಾಮವನ್ನು ಕೊಂಡಾಡುವರು ಎಂಬ ದೇವರ ಪ್ರವಾದನೆಯ ಮಾತು ನೆರವೇರುವುದು ಮತ್ತು ಅವರುಗಳೆಲ್ಲರಿಗೂ ಇನ್ನುಮುಂದೆ ಮರಣವಿಲ್ಲ, ದುಃಖವಾಗಲೀ, ಗೋಳಾಟವಾಗಲೀ ಇಲ್ಲ, ಯಾಕೆಂದರೆ ಹಿಂದಿನ ಸಂಗತಿಗಳೆಲ್ಲಾ ಗತಿಸಿಹೋಗಿವೆ (ಪ್ರಕಟನೆ 21:4, ಕೀರ್ತನೆ 67 ನೋಡಿರಿ) ಎಂಬ ಪ್ರವಾದನಾ ಮಾತುಗಳನ್ನು ಗ್ರಹಿಸಿಕೊಳ್ಳುವರು.

ಮಹಾ ಮಧ್ಯಸ್ಥಗಾರನು ತನ್ನ ಮುಕ್ತಾಯಗೊಂಡ ಕಾರ್ಯವನ್ನು ತಂದೆಗೆ ವಹಿಸಿಕೊಡುವಾಗ ಅಪೋಸ್ತಲನು ಹೇಳುವಂತೆ ತನ್ನ ರಾಜ್ಯವನ್ನೂ ತನ್ನ ಅಧಿಕಾರವನ್ನು ತಂದೆಗೆ ಅಧೀನಪಡಿಸುವನು (1 ಕೊರಿ 15:24–28 ನೋಡಿರಿ). ಮಹಾಮಧ್ಯಸ್ಥನ ವಿಮೋಚನಾ ಕಾರ್ಯದ ನಿರಂತರವಿರುವ ಫಲಿತಾಂಶಕ್ಕಿಂತ ಹೆಚ್ಚಾಗಿರುವುದೇನನ್ನು ಎದುರು ನೋಡೋಣ ?

ಇವುಗಳು ನೆರವೇರುವುವು :–

(1) ಆತನ ಸ್ವಂತ ಅಮೂಲ್ಯ ರಕ್ತದ ಮೂಲಕ ನೂತನ ಒಡಂಬಡಿಕೆಯ ಮುದ್ರೆಯನ್ನು ಒತ್ತುವುದು; ಮನುಕುಲದ ಎಲ್ಲರಿಗೂ ಅದರ ಕೃಪಾಪೂರ್ಣವಾದ ಅವಕಾಶಗಳನ್ನು ಒದಗಿಸುವುದು.

(2) “ಚಿಕ್ಕ ಹಿಂಡನ್ನು” ಇಲ್ಲವೇ “ರಾಜವಂಶಸ್ಥ ಯಾಜಕ ವರ್ಗದವರನ್ನು” ಪುನಃಸಂಧಾನ ಇಲ್ಲವೇ ದೇವರೊಂದಿಗಿನ ಸಾಮರಸ್ಯಕ್ಕೆ ಹಿಂತಿರುಗಿಸುವುದು, ಒಳ್ಳೆಕಾರ್ಯಗಳಲ್ಲಿ ಆಸಕ್ತಿ– ದೇವರ ಸೇವೆಗಾಗಿ ಪ್ರಾಣವನ್ನು ಮುಡುಪಾಗಿಡುವ ಇಚ್ಛೆ ; ಈ ರೀತಿ ಅವರ ರಕ್ಷಕನನ್ನು ಅನುಕರಿಸುವದರ ಕಾರಣ, ಅವರು ದೈವಿಕ ವ್ಯವಸ್ಥೆಯ ಅನುಗ್ರಹದ ಮೇರೆಗೆ ಮಿಲಿಯಾಂತಯುಗದ ರಾಜ್ಯಭಾರದ ವೇಳೆ ಆತನ ಜೊತೆ ಬಾಧ್ಯಸ್ಥರಾಗುವರು ಮತ್ತು ಆತನ ದೈವಿಕ ಸ್ವಭಾವದಲ್ಲಿಯೂ ಪಾಲುದಾರರಾಗುವರು – 1 ಪೇತ್ರ 2:9,10; ತೀತ 2:14; ರೋಮಾ. 8:29 ಇವುಗಳನ್ನು ನೋಡಿರಿ.

(3) ಸಮನ್ವಯಗೊಳಿಸುವುದು, ಸಂಪೂರ್ಣವಾದ ಪುನರ್‌ವಶದಿಂದ ಸಂತೋಷಭರಿತ ಜನರ ಸಮರ್ಪಕತೆಯಿಂದ ಕೂಡಿದ ಭೂಮಿಯಲ್ಲಿ ಪುನಃ ಸಂಧಾನದ ಮೂಲಕ ಮಾನವ ಜಾತಿಯವರೆಲ್ಲರೂ ದೈವಿಕ ಶರತ್ತುಗಳಿಗೆ ಅನುಸಾರವಾಗಿ ದೇವರ ಕೃಪೆಯನ್ನು ಹೊಂದಿಕೊಳ್ಳುತ್ತಾರೆ; ಸಂಪೂರ್ಣವಾಗಿ ಪುನಃವಶ ಹೊಂದಿದ ಇವರುಗಳನ್ನು ಮಧ್ಯಸ್ಥಗಾರನು ತನ್ನ ತಂದೆಯ ಕಡೆಗೆ ತಿರುಗಿಸುವುದು ಮಾತ್ರವಲ್ಲದೆ ಅವರಿಗೆ ನೀತಿವಂತಿಕೆ ಮತ್ತು ಸ್ವಯಂ ನಿಯಂತ್ರಣ, ದೇವರಿಗೆ ಪೂರ್ಣವಾಗಿ ನಿಷ್ಠೆಯಾಗಿರುವ ಬಗ್ಗೆ ಬೋಧಿಸಲಾಗುವುದು ಮತ್ತು ಅವರುಗಳು ಪವಿತ್ರತೆಯನ್ನು ಹೊಂದಿದವರಾಗಿದ್ದು ಇವೆಲ್ಲದುದರ ಆಶೀರ್ವಾದಗಳನ್ನು ಅಂದರೆ ನಮ್ರತೆ, ತಾಳ್ಮೆ, ದೈವತ್ವ–ಪ್ರೀತಿ ಇವುಗಳನ್ನು ಹೊಂದುವಂತೆ ಮಾಡಲಾಗುವುದು. ಈ ಪರಿಸ್ಥಿತಿಯಲ್ಲಿ ಅವರುಗಳು ಖಂಡಿತವಾಗಿಯೂ ಕುಂದಿಲ್ಲದವರೂ, ನಿರ್ದೋಷಿಗಳೂ, ಮತ್ತು ಎಲ್ಲಾ ಶೋಧನೆಗಳನ್ನು ಎದುರಿಸಲು ಸಮರ್ಥರೂ ಆಗುವರು.

(4) ಇನ್ನುಮುಂದೆ ಯಾವುದೇ ಅನುಗ್ರಹಕ್ಕೂ ಅನರ್ಹರೆಂದು ಕಂಡುಬರುವವರ, ಅಡ್ಡಿಯನ್ನುಂಟು ಮಾಡುವ ಉದ್ದೇಶವುಳ್ಳವರ, ಯಾರಿಗೂ ಉಪಯೋಗವಿಲ್ಲದವರ, ಮತ್ತು ಅವರ ಇರುವಿಕೆಯ ಮುಂದುವರಿಕೆ ಮೂಲಕ ಅವರ ಸೃಷ್ಟಿಕರ್ತನಿಗೆ ಯಾವುದೇ ಮಹಿಮೆಯನ್ನುಂಟು ಮಾಡಲಾಗದವರ ನಾಶನವು ಉಂಟಾಗುವುದು.

ಈ ರೀತಿಯಲ್ಲಿ ಮಿಲಿಯಾಂತರ ಯುಗದ ಅಂತ್ಯದಲ್ಲಿ, ಲೋಕವು ಸಂಪೂರ್ಣವಾಗಿ ದೈವಿಕಕೃಪೆಗೆ ಹಿಂತಿರುಗುವುದು ಮತ್ತು. ಪಾಪವು ಲೋಕದೊಳಕ್ಕೆ ಪ್ರವೇಶಿಸುವ ಮೊದಲು ಅದಾಮನು ದೇವರೊಂದಿಗೆ ಹೊಂದಿದ್ದ ಸಾಮರಸ್ಯವನ್ನು ಮಾನವ ಕುಲವು ಪುನಃವಶಪಡಿಸಿಕೊಂಡು ದೇವರೊಂದಿಗೆ ಪೂರ್ಣವಾದ ಪಾಪ ನಿವೃತ್ತಿಯನ್ನು (at-one-ment with God) ಪಡಕೊಳ್ಳುವುದು. ಇದರೊಂದಿಗೆ ಅವರಿಗೆ ಕೆಡುಕನೊಂದಿಗೆ ಅಭೂತಪೂರ್ವ ಅನುಭವವು ಉಂಟಾಗಿರುವುದು; ಈ ವೇಳೆಗೆ ಅವರು ಪಾಪದ ಕಲುಷಿತವನ್ನು ಮತ್ತು ಜ್ಞಾನದ ಲಾಭ ಹಾಗೂ ನೀತಿವಂತಿಕೆಯ ಆಕಾಂಕ್ಷೆಗಳನ್ನು ತಿಳಿದುಕೊಂಡಿರುತ್ತಾರೆ. ಇದರೊಂದಿಗೆ, ಅವರಿಗೆ ಅಧಿಕವಾದ ಜ್ಞಾನವು ಉಂಟಾಗಿ ಮಾನವನು ತನ್ನ ಸೃಷ್ಟಿಯ ಮೂಲದಲ್ಲಿ ಅಪೂರ್ಣವಾಗಿ ಹೊಂದಿದ್ದ ಆದರೆ ಆಗ ಅಪಕ್ವವಾಗಿದ್ದ ವಿವಿಧ ಮೇಧಾಶಕ್ತಿಗಳನ್ನು ವ್ಯಾಪಕವಾಗಿ ಪ್ರಯೋಗಿಸುವ ಸಾಮರ್ಥವನ್ನು ಈಗ ಹೊಂದಿಕೊಳ್ಳುತ್ತಾರೆ. ಈ ಅರಿತುಕೊಳ್ಳುವಿಕೆಯು ಮಾನವನಿಗೆ ಮಾತ್ರವೇ ಲಾಭಧಾಯಕವಾಗಿರದೆ, ಪವಿತ್ರ ದೇವದೂತರುಗಳಿಗೂ ಲಾಭಧಾಯವಾಗಿರುತ್ತದೆ. ಅವರುಗಳು ದೈವಿಕ ನ್ಯಾಯ, ಪ್ರೀತಿ ಮತ್ತು ಜ್ಞಾನದ ಹಾಗೂ ಶಕ್ತಿಯ ಸಮತೂಕ ಸ್ಥಿತಿಯ ನಿರೂಪಣೆಗೆ ಸಾಕ್ಷಿಗಳಾಗಿರುತ್ತಾರೆ. ಇದಿಲ್ಲವಾದಲ್ಲಿ ಇವನ್ನು ಗ್ರಹಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಪಾಠವನ್ನು ಎಲ್ಲರೂ ಸಂಪೂರ್ಣವಾಗಿ ಪಡಕೊಳ್ಳುತ್ತಾರೆ ಮತ್ತು ಇದು ವಿಶಾಲವಾದ ವಿಶ್ವದ ಇನ್ನಿತರ ಗ್ರಹಗಳಲ್ಲಿ ಇನ್ನೂ ಸೃಷ್ಟಿಯಾಗದವರಿಗೂ ಅನ್ವಯವಾಗುವಂತೆ ಸದಾಕಾಲವೂ ನಿಲ್ಲುತ್ತದೆಂದು ನಾವು ಊಹಿಸಬಹುದು.

ಆದ್ಯಂತವಾಗಿ ನಿತ್ಯಕಾಲದಲ್ಲಿ ಹೇಳಲ್ಪಡುವ ಆ ಕಥೆಯ ಕೇಂದ್ರವ್ಯಾವುದು? ಇದುವೇ ಕಲ್ವಾರಿಯಲ್ಲಿ ನಮ್ಮ ಕರ್ತನು ಈಡುಬಲಿಯನ್ನು ಯಶಸ್ವಿಯಾಗಿ ನೀಡುವುದರ ಮೂಲಕ ಸಾಧಿಸಿದ ಪಾಪ ನಿವಾರಣೆಯ ಯಜ್ಞ, ಇದು ಸೂಕ್ತಬೆಲೆಯನ್ನು ತೆರುವುದರ ಮೇಲೆ ಅತುಕೊಂಡಿದ್ದು ದೇವರ ಪ್ರೀತಿ ಮತ್ತು ನ್ಯಾಯವು ನಿಖರವಾಗಿ ಸರಿಸಮವಾಗಿದೆ ಎಂಬುದನ್ನು ಇದು ನಿರೂಪಿಸುತ್ತದೆ.

ಪಾಪ ನಿವೃತ್ತಿಯ ವಿಮೋಚನೆಯ ಮಹತ್ವದ ದೃಷ್ಟಿಯಿಂದ ಮತ್ತು ಇದು ದೇವಜನರಿಂದ ಅಸಮರ್ಪಕವಾಗಿ ಗ್ರಹಿಸಿಕೊಳ್ಳಲಾಗಿದೆ. ಇದಲ್ಲದೆ ಇತರ ವಿಷಯಗಳ ಬಗ್ಗೆ ಇಟ್ಟುಕೊಂಡಿರುವ ತಪ್ಪುಗಳ ದೃಷ್ಟಿಯಿಂದ ಈ ಮಹತ್ವ ಪ್ರಸ್ತಾಪಕ್ಕೆ ಅಡ್ಡಿಯಾಗುತ್ತಿದೆ ಎಂಬ ಕಾರಣ ನಾವು ಈ ಸಂಪುಟದಲ್ಲಿ ವ್ಯಾಪಕವಾಗಿ ಚರ್ಚಿಸುವವರಾಗಿದ್ದೇವೆ ಮತ್ತು ಕೆಳಗಣ ಅನೇಕ ಸಂಗತಿಗಳನ್ನು ವಿಚಾರ ಮಾಡುವವರಾಗಿದ್ದೇವೆ :

(1) ಪಾಪ ನಿವೃತ್ತಿ ಎಂಬ ಯೋಜನೆಯ ಕರ್ತೃವಾದ ಯೆಹೋವನು.

(2) ಈ ಪಾಪ ನಿವೃತ್ತಿಯ ಯಜ್ಞವನ್ನು ನೇರವೇರಿಸಿದ ಮಧ್ಯಸ್ಥನು ಮತ್ತು ಈತನ ಸಾಧನೆಯ ಮೂಲಕ ಉಂಟಾದ ಇದರ ಎಲ್ಲಾ ಅನುಗ್ರಹಗಳು ಮಾನವರಿಗೆ ಅನ್ವಯವಾಗುವ ಬಗ್ಗೆ.

(3) ದೇವರೊಂದಿಗಿನ ಪುನಃಸಂಧಾನದ ಆಶೀರ್ವಾದಗಳು ಪವಿತ್ರಾತ್ಮ ಎಂಬ ವಾಹಿನಿಯ ಮೂಲಕವಾಗಿ ಮಾನವ ಜನಾಂಗಕ್ಕೆ ಹರಿದುಬಂದುದರ ಬಗ್ಗೆ.

(4) ಈ ಇಡೀ ಮಹಾ ಯೋಜನೆಯನ್ನು ರೂಪಿಸಲು ಕಾರಣನಾದ ಮಾನವ ಜಾತಿಯ ಬಗ್ಗೆ.

(5) ಪಾಪ ನಿವೃತ್ತಿಯ ಕೇಂದ್ರ ಬಿಂದುವಾದ "ಈಡು ಬಲಿ"ಯ ಬಗ್ಗೆ.

ಇವು ಅವರಿಗೆ ಸೂಕ್ತವೂ, ತಾರ್ಕಿಕವೂ ಆದ ಕ್ರಮದಲ್ಲಿದೆ ಎಂದು ನಾವು ನಂಬಿರುವ ಈ ಎಲ್ಲಾ ಸಂಗತಿಗಳ ಬಗ್ಗೆ ಮಾತನಾಡುತ್ತಾ ಈ ವಿವಿಧ ಪ್ರಸ್ತಾಪಗಳ ಬಗ್ಗೆ ಸ್ಪಷ್ಟವೂ, ಬಲಯುಕ್ತವೂ, ತೃಪ್ತಿಧಾಯಕವೂ ಆದ ದೈವಿಕ ಹೇಳಿಕೆಗಳನ್ನು ಕಂಡುಕೊಳ್ಳುತ್ತೇವೆಂಬ ಮತ್ತು ಇವುಗಳು ನಾವು ಈವರೆಗೆ ಹೊಂದಿದ್ದ ತಪ್ಪು ಗ್ರಹಿಕೆಗಳನ್ನು ನೀಗಿಸುತ್ತವೆ ಎಂಬ ಭರವಸೆಗಳನ್ನು ನಾವು ಹೊಂದಿದ್ದೇವೆ. ಯಾಕೆಂದರೆ ಅವುಗಳು ಈ ಪಾಪ ನಿವೃತ್ತಿಯೆಂಬ ಮಹತ್ವವಾದ ಸಂಗತಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಅಡ್ಡಿಯಾಗಿದ್ದು ನಮ್ಮ ಮನದಲ್ಲಿ ಇಬ್ಬನಿಯಂತೆ ಕವಿದುಕೊಂಡಿದ್ದು, ರಹಸ್ಯ ಸಂಗತಿಯಾಗಿ, ತಪ್ಪು ಕಲ್ಪನೆಗಳಿಗೆ ಕಾರಣವಾಗಿವೆ. ಆದರೆ, ಈ ಅಪೇಕ್ಷಿತ ಫಲಿತಾಂಶಗಳನ್ನು ಹೊಂದಿಕೊಳ್ಳಲು ನಾವು ಈ ಪ್ರಸ್ತಾಪಕ್ಕೆ ಮಾನವ ನಿರ್ಮಿತ ಮತಸೂತ್ರಗಳ ಮೂಲಕ ಅಥವಾ ಅಭಿಪ್ರಾಯಗಳ ಮೂಲಕ ಸಮೀಪಿಸಬಾರದು. ನಾವು ಎಲ್ಲಾ ಪೂರ್ವಕಲ್ಪಿತ ಅಭಿಪ್ರಾಯಗಳಿಂದ ನಿಗ್ರಹಗೊಳ್ಳದೆ, ಪೂರ್ಣ ಇಚ್ಛೆಯುಳ್ಳ ಸಿದ್ಧತೆ ಮಾಡಿಕೊಳ್ಳಬೇಕು, ಅದಲ್ಲದೆ ನಾವು ದೇವರಿಂದ ಕಲಿತುಕೊಳ್ಳುತ್ತೇವೆಂಬ ಅಪೇಕ್ಷೆ ಹೊಂದಿದವರಾಗಿರಬೇಕು. ಈವರೆಗೆ ನಮ್ಮ ಸ್ವಂತ ಊಹೆಗಳಿಂದ ಅಥವಾ ಇತರರ ಸಲಹೆಗಳ ಮೇರೆಗೆ ನಾವು ಈವರೆಗೆ ಕಲಿತಿದ್ದ ಅವುಗಳು ದೇವರ ವಾಕ್ಯಕ್ಕೆ ಸಾಮರಸ್ಯವಾಗದ ಕಾರಣ ಮರೆತುಬಿಡಬೇಕು. ಈ ಪ್ರಸ್ತಾಪದ ಪ್ರತಿಯೊಂದು ಲಕ್ಷಣದಲ್ಲಿಯೂ ದೇವರ ಸಮಾಲೋಚನೆಯನ್ನು ಪಡಕೊಳ್ಳಲು ಕಾತುರರಾಗಿರಬೇಕು. ಈ ರೀತಿಯಾಗಿ ಬರುವವರೆಲ್ಲರಿಗೂ, ಬಯಸುವವರೆಲ್ಲರಿಗೂ, ತಟ್ಟುವರೆಲ್ಲರಿಗೂ ಮಹಾ ಗುರುವು ತನ್ನ ಮಾರ್ಗವನ್ನು ತೆರೆಯಮಾಡುತ್ತಾನೆ. ಅವರೆಲ್ಲರೂ "ಕರ್ತನಿಂದ ಶಿಕ್ಷಿತರಾಗುವರು" – ಯೆಶಾಯ 54:13.

* * * * * *